ಯಕ್ಷಗಾನ

ತ್ರಿಪುರ ಮಥನ



ಅಮೃತ ಸೋಮೇಶ್ವರ

ನಿತ್ಯಾನಂದ ಗ್ರಂಥಾಲಯ
ಮಂಗಳೂರು-575 001

ನಮ್ಮಲ್ಲಿ ದೊರೆಯುವ ಅಮೂಲ್ಯ ಕನ್ನಡ ಗ್ರಂಥಗಳು

ಕುಮಾರವ್ಯಾಸ ಭಾರತ	60	00
ತೊರವೆ ರಾಮಾಯಣ (ಭಾಗ 1 ಮತ್ತು 2)	35	00
ಶ್ರೀಮದ್ ಭಗವದ್ಗೀತಾ ರಹಸ್ಯ (ಬಾಲಗಂಗಾಧರ ತಿಲಕ)	50	00
ಯೋಗವಾಸಿಷ್ಠ	25	00
ಶ್ರೀ ಗುರು ಚರಿತ್ರೆ	30	00
ಸಟೀಕಾವ್ರತರತ್ನಂ	22	50
ಗೀತಾಭಾವಧಾರೆ (ಟೀಕೆ ಸಹಿತ)	35	00
ಉಪನಿಷತ್ತು ಭಾವಧಾರೆ	35	00
ಲಲಿತಾ ಸಹಸ್ರನಾಮ (ಟೀಕೆ ಸಹಿತ)	20	00
ಶ್ರೀ ದುರ್ಗಾಸಪ್ತಶತಿ (ಟೀಕೆ ಸಹಿತ)	10	00
ವಚನ ರಾಮಾಯಣ	8	00
,, ಜೈಮಿನಿ ಭಾರತ	8	00
,, ಭಾಗವತ	10	00
,, ಭಾರತ	7	00
ಶ್ರೀಕೃಷ್ಣ ಬೋಧಾಮೃತ	5	00
ಮದನಮೋಹನರಾಜ ಚರಿತ್ರೆ	5	00
ಬ್ರಹ್ಮೋತ್ತರಖಂಡ	4	00
ವಚನ ದೇವಿಮಹಾತ್ಮೆ	6	00
ಪದ್ಯ ದೇವಿಮಹಾತ್ಮೆ	8	00
ಭಕ್ತಿ ವಿಜಯ	5	00
ಶಿವಪುರಾಣ ಕಥಾವಳಿ	5	00
ಶಿವಲೀಲಾಮೃತ	5	00
ದೇವೀ ಪುರಾಣ (ಸಟೀಕಾ)	15	00
ಪುರಂದರದಾಸರ ಪದಗಳು	8	00
ಸರ್ವಜ್ಞ ವಚನಗಳು	8	00
ಬಸವಣ್ಣನವರ ವಚನಗಳು	8	00
ಕುರುಕ್ಷೇತ್ರಕ್ಕೊಂದು ಆಯೋಗ	10	00
ಪುರಾಣನಾಮ ಚೂಡಾಮಣಿ	20	00
ಶ್ರೀ ರಾಘವೇಂದ್ರ ಚರಿತ್ರೆ	5	00
ಸ್ವಾಮಿ ಅಯ್ಯಪ್ಪ ಮಹಿಮೆ	3	00
ಜ್ಯೋತಿಷ ಬೋಧಿನಿ (ಬಿ. ಜಿ. ಆಚಾರ್ಯ)	10	00
ಆಯುರ್ದಾಯ ,,	10	00
ಷಟ್ ಪಂಚಶಿಕಾ ,,	12	00
ಫಲದೀಪಿಕಾ ,,	13	00
ಚಿದಾಕಾಶ ಗೀತಾ	1	40

ವಿ. ಸೂ.: ಉಚಿತ ಕ್ರಯ ಪಟ್ಟಿಗಾಗಿ 50 ಪೈಸೆ ಅಂಚೆ ಚೀಟಿಯೊಂದಿಗೆ ಪ್ರಕಾಶಕರಿಗೆ ಬರೆಯಿರಿ. ಹೊಸ ಮುದ್ರಣಗಳಿಗೆ ಬೆಲೆ ಬದಲಾವಣೆ ಇರುವುದರಿಂದ ಮುಂಚಿತವಾಗಿ ಬರೆದುಕೊಂಡು ವ್ಯವಹರಿಸಿರಿ.

ಯಕ್ಷಗಾನ

ತ್ರಿಪುರ ಮಥನ

ಲೇಖಕರು :

ಅಮೃತ ಸೋಮೇಶ್ವರ

ಪ್ರಕಾಶಕರು :

ಮಂಗಳೂರು

ದೂರವಾಣಿ : 27775

ಪ್ರಥಮ ಆವೃತ್ತಿ

1984

ಬೆಲೆ : ರೂ. 2-00

ಯಕ್ಷಗಾನ
ತ್ರಿಪುರ ಮಥನ

ಲೇಖಕರು :

ಅಮೃತ ಸೋಮೇಶ್ವರ.

ಪ್ರಕಾಶಕರು :

ನಿತ್ಯಾನಂದ ಗ್ರಂಥಾಲಯ
ಮಹಾನಗರಪಾಲಿಕೆ ಬಸ್ ನಿಲ್ದಾಣ
ಹಂಪನಕಟ್ಟೆ ಮಂಗಳೂರು - 575001
(ದೂರವಾಣಿ: 27775)

ರಕ್ಷಾಪುಟ (ಆಫ್‌ಸೆಟ್)
ಶಾರದಾ ಪ್ರೆಸ್ ಮಂಗಳೂರು - 575 005.

ಪ್ರಥಮ ಆವೃತ್ತಿ 1984

ಬೆಲೆ: ಎರಡು ರೂಪಾಯಿಗಳು.

ಅರಿಕೆ.

ಇಂದಿನ ಆಧುನಿಕ ವೈಜ್ಞಾನಿಕ, ವೈಚಾರಿಕ ಯುಗದ ಅನೇಕ ಸಾಧನೆಗಳಿಗೆ ಮೂಲವಾದ ಕನಸುಗಳ ಮಾತೃಕೆಗಳು ಪುರಾಣಗಳ ಪುಟಗಳಲ್ಲಿ ಕಾಣಸಿಗುತ್ತವೆ. ಹಾಗೆಂದು ಇಂದಿನ ವೈಜ್ಞಾನಿಕ ಸಾಧನ ಸಲಕರಣೆಗಳೇ ಹಿಂದೆ ಇದ್ದುವೆಂದರ್ಥವಲ್ಲ. ಅಂಥ ಕಲ್ಪನೆಗಳಂತೂ ಇದ್ದುದು ಸತ್ಯ. ಮನೋದೇಹಿಯೂ ಕಲ್ಪನಾವಿಲಾಸಿಯೂ ಆದ ಮಾನವನಿಗೆ ಚಿರಂಜೀವಿಯಾಗುವ, ಆಗಸಕ್ಕೆ ನೆಗೆಯುವ ಊರ್ಧ್ವಮುಖೀ ಅಭಿಲಾಷೆ ಅಸಹಜವಲ್ಲ. ಅಂಥ ಅದಮ್ಯ ಕನಸುಗಳ ಪ್ರತಿಮೆಗಳಾಗಿ, ಸಾಹಿತ್ಯ ಕಲೆಗಳಲ್ಲಿ ಸಾಕಷ್ಟು ವಿಲಕ್ಷಣ ಅಭಿವ್ಯಕ್ತಿಗಳು ಅಲ್ಲಲ್ಲಿ ಲಭ್ಯವಾಗುತ್ತವೆ. ಪುರಾಣಗಳಲ್ಲಂತೂ ಸಾಂಕೇತಿಕ ರೂಪಕಗಳು ಹೇರಳವಾಗಿವೆ.

ತ್ರಿಪುರ ಸೃಷ್ಟಿಯ ಕಥೆಯೂ ಅಂಥದೊಂದು ಅದ್ಭುತರಮ್ಯ ಕಲ್ಪನೆಗೆ ಕನ್ನಡಿ ಹಿಡಿಯುತ್ತದೆ. ಭಾರತ, ಭಾಗವತ, ಮತ್ಸ್ಯಪುರಾಣಾದಿಗಳಲ್ಲಿ ಕಂಡು ಬರುವ ತ್ರಿಪುರಾಸುರ ಸಂಹಾರದ ಕಥೆಗೆ ಇಲ್ಲಿ ಪ್ರಸಂಗ ರೂಪ ಪ್ರಾಪ್ತವಾಗಿದೆ. ಹಾಗೆಂದು ಪುರಾಣದ ಮಕ್ಕಿಕಾ ಮಕ್ಕಿ ರೂಪ ಇದಲ್ಲ, ಮಲೆಯಾಳದ ಸುಪ್ರಸಿದ್ಧ ತುಳ್ಳಲ್ ಕವಿ ಕುಂಜನ್ ನಂಬಿಯಾರರ 'ತ್ರಿಪುರ ದಹನಂ' (ಅನುವಾದ: ದಿ. ಡಾ। ಬಿ. ಕೆ. ತಿಮ್ಮಪ್ಪ) ಕಾವ್ಯದ ಕೆಲವು ಭಾಗಗಳಿಂದ ಉಪಕೃತನಾಗಿದ್ದೇನೆ.

ವೈಜ್ಞಾನಿಕತೆ, ವೈಚಾರಿಕತೆ ಅಥವಾ ಅತಿ ಭೌತಿಕವಾದ ಮಾನವತೆಯು ಮೇರೆ ಮೀರಿ ಅತಿಯಾಗಿ ವಿಜೃಂಭಿಸಿದಾಗ ಅದು ಲೋಕಕಂಟಕವಾಗುವ ಸಾಧ್ಯತೆಯಿದೆ; ಅತಿರೇಕತೆಯೇ ಅಧಃಪತನಕ್ಕೆ ನಾಂದಿ ಎಂಬುದೇ ಈ ಕಥೆಯ ಹುರುಳಲ್ಲದೆ ಇದೇನೂ ವಿಜ್ಞಾನವನ್ನು ವಿಡಂಬಿಸಲು ಹೊರಟ ಪ್ರಯತ್ನವಲ್ಲ.

ಯಕ್ಷಗಾನ ಪ್ರಯೋಗದ ಸಾಂಕೇತಿಕತೆ, ಕಥನ ಸಂದೇಶ, ರಂಗದೃಶ್ಯ ಕಲ್ಪನೆ, ಜನಪದ ಮನಸ್ಸಿಗೆ ಪ್ರಿಯವಾದ ಅದ್ಭುತ ರಮ್ಯತೆಗಳನ್ನು ರಸಿಕ ಸಹೃದಯರು, ಯಕ್ಷಗಾನವನ್ನು ಅವಲೋಕಿಸಬೇಕಾದ ವಿಶಿಷ್ಟ ಮನೋ

ಭೂಮಿಕೆಯ ಮೂಲಕ ಗ್ರಹಿಸಬೇಕಲ್ಲದೆ ಕೇವಲ ಐತಿಹಾಸಿಕ ಸಹಜತೆಯ ಅಥವಾ 'ಪುರಾಣ ಸತ್ಯ'ದ ದೃಷ್ಟಿಯಿಂದ ನೋಡಹೋಗುವುದು ಸೂಕ್ತವಲ್ಲ. ಶಿಶುಮಾಯಣ ಕವಿಯ 'ತ್ರಿಪುರ ದಹನ' ಕೃತಿಯಲ್ಲಿ ಜನ್ಮ ಜರಾ ಮರಣ ಎಂಬ ಮೂರು ಪುರಗಳನ್ನು ಕಟ್ಟಿ ಅಟ್ಟಹಾಸವೆಸಗುತ್ತಿದ್ದ ಮೋಹಾಸುರನನ್ನು ಜಾತರೂಪನಾದ ಆದೀಶ್ವರ ಸುಟ್ಟನೆಂಬ ಸಂಕೇತಾತ್ಮಕ ಕಥನವಿದೆ.

ಶ್ರೀ ಧರ್ಮಸ್ಥಳ ಯಕ್ಷಗಾನ ಮೇಳಕ್ಕಾಗಿ ಈ ಪ್ರಸಂಗವನ್ನು ಬರೆಯಿಸಿದ ಸನ್ಮಾನ್ಯ ಡಿ. ವೀರೇಂದ್ರ ಹೆಗ್ಗಡೆ ಅವರಿಗೆ ನಮನಗಳು. ಕೃತಿಯನ್ನು ರಂಗದಲ್ಲಿ ಸಾಕಾರಗೊಳಿಸಿದ ಸಮಸ್ತ ಕಲಾವಿದರಿಗೆ ನಮಸ್ಕಾರ. ಕೃತಿಯನ್ನು ನೋಡಿ ಸೂಕ್ತ ಸಲಹೆ ಇತ್ತ ಮಿತ್ರ ಶ್ರೀ ಎಂ. ಪ್ರಭಾಕರ ಜೋಶಿಯವರಿಗೆ ಕೃತಜ್ಞತೆಗಳು. ಇದನ್ನು ಪ್ರಕಟಿಸಿದ ಮಂಗಳೂರಿನ ನಿತ್ಯಾನಂದ ಗ್ರಂಥಾಲಯಕ್ಕೆ ನಾನು ಋಣಿಯಾಗಿದ್ದೇನೆ.

ಸಹೃದಯರ ವಿಮರ್ಶೆಗೆ ಸ್ವಾಗತ.

ಪುತ್ತೂರು,
14-1-1984.
ಮಕರ ಸಂಕ್ರಮಣ.

ಅಮೃತ ಸೋಮೇಶ್ವರ.

ಪಾತ್ರವರ್ಗ

ಪರಮೇಶ್ವರ
ದೇವೇಂದ್ರ
ಅಗ್ನಿ
ವಾಯು
ಯಕ್ಷ
ನಾರದ
ತಾರಕಾಕ್ಷ
ತಾಮ್ರಾಕ್ಷ
ವಿದ್ಯುನ್ಮಾಲಿ
ಚಂದ್ರ
ಬ್ರಹ್ಮ
ವಿಷ್ಣು
ಮಯ
ಶೇಷ
ಡುಂಡುಭ
ಭ್ರಮಾಸುರ
ಡಿಂಡಿಮಾಸುರ
ಚಾರ್ವಾಕ

ಸ್ತ್ರೀ ಪಾತ್ರಗಳು

ಶಚಿ
ತಾರಾಮಣಿ
ಸರಸ್ವತಿ
ಪಾರ್ವತಿ
ಸಖಿ

ನಟರು, ಋತ್ವಿಜರು, ದೂತರು ಇತ್ಯಾದಿ.

ಯಕ್ಷಗಾನ

ತ್ರಿಪುರ ಮಥನ

॥ ಭಾಮಿನಿ ॥

ಅರ್ಥಕಾಮವೆ ಜೀವನಕೆ ಪುರು । ಷಾರ್ಥವೆನುತಲೆ ಬಗೆಯು
ತಾತ್ಮಕೆ । ಸ್ವಾರ್ಥದುರ್ಗವ ಬಲಿದು ಬಯಲಾಡಂಬರದಿ ನೆಗೆದು ॥
ವ್ಯರ್ಥ ಭ್ರಮಣವಗೈದು ಇಹದ ಸ । ದರ್ಥವನು ವಿಸ್ಮರಿಪರಿಗೆ
ಪರ । ಮಾರ್ಥದರಿವಿನ ಬೆಳಕು ಮೂಡಲಿ ಮಾನಸಾಂಬರದಿ ॥

॥ ಶ್ರೀ ॥

ಯಕ್ಷಗಾನ

ತ್ರಿಪುರ ಮಥನ

ಸೌರಾಷ್ಟ್ರ—ತ್ರಿವುಡೆ

ಶ್ರೀ ಮಹಾ ಕೈಲಾಸ ಲೋಕದಿ । ಕಾಮಹರ ತಾನೊಂದು ದಿನ ನಿಜ । ಭಾಮಿನಿಯ ಕರೆದೆಂದನತಿ ಸು । ಪ್ರೇಮದಿಂದ ॥ ೧ ॥ ಅಗಜೆ ಲಾಲಿಸು ಲೋಕಜೀವರ । ಬಗೆಯು ಬಣ್ಣಿಪೆನೆಂತು ಚಿತ್ರವು । ಜಗದ ಕಾರಣ ಕರ್ತರನು ತಾವ್ । ಮಿಗುವರ್ಸೈಸೆ ॥ ೨ ॥ ಬಳಸೆ ಬಲುವಿಧ ಸಂಕಟಗಳಾ । ಗಳಲಿ ಬಳಲುತ ಭಜಿಪರೆಮ್ಮನು । ತೊಲಗೆ ಪೀಡೆಯು ಬಳಿಕನೆನಹನು । ಕಳೆವರೆಲ್ಲ ॥ ೩ ॥ ತಾರಕನ ವಧೆಗೈದು ನಮ್ಮ ಕು । ಮಾರನಾ ಸುಮನಸರ ಕಷ್ಟವ । ದೂರ ಗೈಯಲು ದಿವಕೆ ಸುಖದಾ । ದಾರಿಯಾಯ್ತು ॥ ಹೊಳೆಯು ದಾಟಿದ ಬಳಿಕಲಂಬಿಗ । ನೊಲವ ಹೀಗಳೆದಂತೆ ತಮ್ಮಯು । ಬಲವ ನೆಚ್ಚಿಯೆ ಮೆರೆವರಾ ಬಿರ್ದಿಲದಿ ಸುರರು ॥ ೪ ॥

ಸಾಂಗತ್ಯ—ರೂಪಕ

ಹರನೆನಲಿಂತು ಶಂಕರಿ ಕಾಂತಗೆಂದಳು । ಸುರರಿಂತು ಸೊಕ್ಕಿ ಮೈಮರೆದು ॥ ಮೆರೆದಾಡದಂತೆ ಮದ್ದರೆವುದೆ ವಿಹಿತವು । ಮರೆಯದಂದದಿ ಪೂರ್ವ ಸ್ಥಿತಿಯ ॥ ೧ ॥ ಅನಿಮಿಷರಿರವನು ಪರಿಕಿಸಿ ನೋಳ್ಪೆನು । ತ್ರಿಣಯನೆ ನೀಡನುಮತಿಯ ॥ ಎನಲೆಂದ ನಭವನು ಕಾಂತೆ ನಿನ್ನಯ ಮನ । ದನುವನು ನೆರವೇರಿಸೆನಲು ॥ ೨ ॥

ಭಾಮಿನಿ

ದೇವಿ ಸರ್ವೇಶ್ವರಿಯು ಮನದೊಳ। ಗೋವಿ ಹವಣನ್ನೊಂದ ನಾಗಳೆ। ಭಾವಿಸುತ್ತಿರಲತ್ತಲಮರಾವತಿಯ ಭವನದಲಿ ॥ ದೇವ ಸ್ತೋಮವ ನೆರಹಿ ವಿಭವದಿ । ಸಾವನುಳಿದವರಾಣ್ಮ ತಾನತಿ । ರೀವಿಯಿಂದೊಡ್ಡೋಲಗದಿ ಮಂಡಿಸುತಲಿಂತೆಂದ ॥ ೧ ॥

ಮಧುಮಾಧವಿ—ಏಕ

ಸುಮನಸರೆಲ್ಲ ಲಾಲಿಪುದೊಂದು ಸೊಲ್ಲ । ಅಮರಾವತಿಯ ಮೇಲ್ಮೆ ಗೊರೆದೊರೆಯಿಲ್ಲ ॥ ಭ್ರಮಿಸುತಾಕ್ರಮಿಸಿ ಬಂದಿಹ ಖಳರೆಲ್ಲ । ದಮನ ಗೊಂಡಾ ಯಮನವರಾದರಲ್ಲ ॥ ೧ ॥ ಪಡೆವೆವು ನಾಕವನೆನುವ ಹಂಬಲದಿ । ದಡಿಗ ರಕ್ಕಸರು ತಪವ ಗೈಯೆ ಚಲದಿ ॥ ಜಡಜ ಸಂಭವ ಮೃಡರೊಡನೆ ವ್ಯೆದೋರಿ । ಕೊಡುವರು ವರಗಳ ದುಡುಕುತ್ತ ಮೀರಿ ॥ ೨ ॥ ವರವಿತ್ತ ಮಹಿಮರ್ಗೆ ದಾಕ್ಷಿಣ್ಯದೋರಿ । ದುರುಳರ್ಗೆ ಸೋತೆವು ಕೆಲವೊಂದು ಬಾರಿ ॥ ಸುರರೆಮ್ಮ ಶೌರ್ಯದ ಕೊರತೆಯಿಂದಲ್ಲ । ನೆರೆ ಯೋಚಿಸದೆ ವರ ಗಳನಿತ್ತರಲ್ಲ ॥ ೩ ॥

ಭೈರವಿ—ಅಷ್ಟ

ಒಡನೆಂದ ಪಾವಕನು । ತ್ರೈಮೂರ್ತಿಗ । ಳೆಡೆಗೊಟ್ಟು ದನುಜರನು ॥ ಕಡು ಕೊಬ್ಬಿಸಿದರೈಸೆ ಖಳರ ಬಾಧೆಯು ನಮ । ಗಡಿ ಗಡಿ ಗಡ ಸಿದುದು ॥೧॥ ಪವನ ತಾ ಪೇಳ್ದನಂದು । ತಾರಕನನ್ನು । ಸವರಲ್ಕೆ ಸ್ಕಂದಗೊಂದು ॥ ಅವಕಾಶವಿತ್ತೆವಲ್ಲದೆ ದುರುಳರಿಗಂಜಿ । ಜವಗೆಟ್ಟುದಿಲ್ಲ ನಾವು ॥ ೨ ॥

ಭಾಮಿನಿ

ದಂಭ ವಚನವ ಕೇಳ್ದು ತೋಷಿಸಿ । ಜಂಭ ವೈರಿಯು ನುಡಿದನಹು ದಹು । ದಂಬರದ ರವಿಬಿಂಬ ಮಾಸುವುದುಂಟೆ ಮೇಘದಲಿ ॥ ತುಂಬಿರುವ ಜಲನಿಧಿಯು ಬತ್ತುವು । ದೆಂಬರೇ ಕ್ರತುಭುಜರ ಶೌರ್ಯಕೆ । ಬೆಂಬಲವು ಬೇಕಿಹುದೆ ಮೂರ್ತಿತ್ರಯರ ಹಂಗಿಗರೆ ॥ ೧ ॥

ಕೇತಾರ—ಅಷ್ಟ

ಎನ್ನುತಲಿರಲಾಗ ಮಹತೀ ವೀಣೆಯ ನಾದ । ವನ್ನು ತಾ ಗೈಯು ತಲಿ ॥ ಸನ್ನುತ ಮುನಿವರ ನಾರದ ಬರೆ ಹರಿ । ಯನ್ನು ತಾ ನುತಿಸುತಲಿ ॥ ೧ ॥ ಸುರ ಮುನಿಯನು ಕಂಡು ಸುರಪನು ತಾನುಪ । ಚರಿಸುತ್ತ ಪೀಠ ವಿತ್ತು ॥ ಹರುಷದಿ ಕುಶಲ ವಾರ್ತೆಯ ಕೇಳೆ ನಾರದ । ನೊರೆದನು ಬಳಿಕ ಲಂದು ॥ ೨ ॥

ಬೇಗಡೆ—ತ್ರಿವುಡೆ

ಕರಿಗಮನ ಲಾಲಿಪುದು ನುಡಿಗಳನು । ಏನೆಂಬೆನಿಲ್ಲಿಗೆ । ಬರುವ

ವೇಳೆಗೆ ಕಂಡ ಚೋದ್ಯವನು ॥ ಪರಮ ದಿವ್ಯ ಪ್ರಕಾಶವೊಂದಂ । ಬರಕೆ ಹಾಯುತ ತುಂಬಿ ನಿಂತಾ । ಉರವಣಿಯು ನೋಡುತ್ತಲಿರೆಯಿರೆ । ಗಗನದ ಯಕ್ಷಾಕಾರವಾದುದು ॥ ೧ ॥ ಅದರ ಬಣ್ಣಿಸಲರಿದು ರೂಪವನು । ಆಕಾಶಮಂಡಲ । ಕಮರಿ ನಿಂತ ವಿರಾಟ ಗಾತ್ರದನು ॥ ಭ್ರಮಿಸಿ ಪೋದೆನು ಕಂಡುದಿಲ್ಲೀ । ಕ್ರಮದ ಚೋದಿಗ ವಿವರ ದುರ್ವರ್ಣವ । ನೆಮಗೆ ಗ್ರಹಿಸಲು ಬಾರದಕಟಾ । ಅಮರ ವಿಭು ನೀ ಪರಿಕಿಸುವುದೈ ॥ ೨ ॥

ಸಾಂಗತ್ಯ—ರೂಪಕ

ಸುರರೆಲ್ಲ ಕೇಳ್ದಿರೆ ಕಂಡರಿಯದ ವಾರ್ತೆ । ಯೊರೆದನು ನಾರದ ಮುನಿಪ ॥ ಪರಿಕಿಸ ಬೇಕಿದರಡಿಯನೀ ಕ್ಷಣದೊಳು । ತೆರಳುವುದಾಯೆಡೆ ಗೆನಲು ॥ ೧ ॥ ದಿವಿಜರನೊಡಗೂಡಿ ಬಂದ ಪುರಂದರ । ಸುವಿಶಾಲ ನಂದನ ವನಕೆ । ತವಕದಿ ತಲೆಯೆತ್ತಿ ನೋಡಿದರಾಗ ವ್ಯೋ । ಮವನು ವ್ಯಾಪಿಸಿದ ರೂಪೊಂದ ॥ ೨ ॥ ಬಗೆಗೆ ಬಾರದ ಭವ್ಯಾಕಾರ ಬಾಂದಳದಲ್ಲಿ । ಮಿಗೆ ಶೋಭಿಸುತ್ತಿರೆ ಕಂಡು ॥ ನಗಪರ ಸಹಿತೆಲ್ಲರಚ್ಚರಿವಟ್ಟಿರೆ । ನಗುತೆಂದ ಶಿಖಿ ನಾಕೇಶನೊಳು ॥ ೩ ॥

ಸೌರಾಷ್ಟ್ರ—ತ್ರಿವುಡೆ

ಪ್ರಭುವೆ ಲಾಲಿಸು ನಿಮಿಷದೊಳಗಾ । ನಭದಿ ರಾಜಿಪ ಚೋದ್ಯದೆಡೆಗಾ । ನಭಗಮಿಸಿ ನಾನರಿವೆ ಕೈತವ । ವಿಭವವನ್ನು ॥ ೧ ॥ ಜಾತವೇದ ನಿಗಮಮತಿಯ ಪುಲು । ಪೂತ ನೀಡಲು ಬಳಿಕ ದರ್ಪದೊ । ಳಾತ ಧಾವಿಸಿ ಬಂದ ಬಿಸಗೊಂಬಾತುರದಲಿ ॥ ೨ ॥ ಘಳಿಲನೈದುತ ಭವ್ಯ ಸನ್ನಿಧಿ । ಯೊಳು ನಿಲಲ್ಕಾ ಯಕ್ಷ ಮುಖದಿಂ । ಮೊಳಗಿತಾಗಲೆ ಪ್ರಶ್ನೆಯೊಂದಾ । ಘಳಿಗೆಯಲ್ಲಿ ॥ ೩ ॥ ಧುರಿಪೇಗದೊಳಿಲ್ಲಿ ಗೈದಿದ । ವೀರನೀನಾರೆಲವೊ ನಿನ್ನಯ । ಕಾರಣಕವೇನೆಂದು ಭವ್ಯಾಕಾರ ಬೆಸಸೆ ॥ ೪ ॥ ಸರ್ವ ಭಕ್ಷಕನೆಂದ ಕೇಳೈ । ಸರ್ವ ವಸ್ತುವ ದಹಿಪ ಶಕ್ತನು । ಸರ್ವ ವಂದ್ಯನು ಎಂದನಗ್ನಿಯು । ಗರ್ವದಿಂದ ॥ ೫ ॥ ಆದಕೆ ನಗುತಲೆ ಯಕ್ಷನೆಂದಿತು । ಇದಕೊ ತೃಣಕಣ ವೊಂದನಿರಿಸಿಹೆ । ನಿನಗೆ ಸುಟ್ಟುರುಹಲ್ಕೆ ಶೌರ್ಯವು । ವಿದಿತವಹುದು ॥೬॥ ಗದಗದಿಸಿ ಪೇಳಲ್ಕೆಯಬ್ಬು ತೃಣವನು । ಹಲವಡಿಂ ಭಸ್ಮವನು ಗೈವಡೆ ಬಹುವಿಧಾವದಿ ಯತ್ನಗೈದರು । ವಹಿಸದಿರಲು ॥ ೭ ॥

ಕಂದ

ಬೆರಗುಂ ಲಜ್ಜೆಯುಂ ಪೊದವಲ್ । ಮೆರೆಯಾದಂ ಜಾತವೇದನಸದಳವೆನುತಂ ॥ ಮರಳ್ದು ಮೇಘವನಿಗೇರಗುತ । ಲೊರೆದಂ ಪರಿಭವದ ಚಿತ್ರರೀತಿಯನಾಗಳ್

ಮಾರವಿ—ಏಕ

ಒಡನಾ ವಾಯುವು ಸಿಡಿಯುತ ಲೆದ್ದನು । ಸುಡನೇ ಹುತವಹನ ॥ ಕೊಡುತನಗಪ್ಪಣೆ ಯಕ್ಷದ ಮೂಲವ । ಪ್ರಡುಕುವೆ ಕ್ಷಣಗೊಳಗೆ ॥ ೧ ॥ ಎಂದಪ್ಪಣೆಯನು ಪೊಂದುತಲನಿಲನು । ಬಂದನು ವೇಗದಲಿ ॥ ಸಿಂದಾ ಬೃಹದಾಕಾರವು ದಟ್ಟಿಸು । ತೆಂದಿತು ಪವನನೊಳು ॥ ೨ ॥ ಕೊಂದನದಾವನಾ ಪೇಳ್ಳೆ ಬಂದಿಹ । ಕಾರಣವನ್ನೆನಲು ॥ ಘೋರನೆ ಗರ್ಜಿಸುತೆಂದ ಪ್ರಭಂಜನ । ತೋರುತ ದುರ್ವಾದವ ॥ ೩ ॥ ಜಗದ ಚರಾಚರ ಪ್ರಾಣಚಲನವನು । ಮಿಗೆ ನಡೆಸುವ ವಾಯು ॥ ವಿಗಡ ಬಲಾಢ್ಯನು ಅಡಿಮೇಲಾಗಿಪೆ । ಜಗತೀವಲಯವನು ॥೪॥ ಗಾಳಿಯೆ ತಾಳ್ಮೆ ಪರಿಕಿಪೆ ಸತ್ವವ । ಕೋಲಾಹಲವೇಕೆ ॥ ಕಾಲ ಬಳಿಯೊಳಿಹ ಹುಲು ಕಡ್ಡಿಯನಿದ । ಕೀಳುತ ಹಾರಿಪೆಯ ॥ ೫ ॥ ಮರುಳು ನಗೆಯೊಳಾ ಮರುತನು ಬೀಸಿದ । ಭರದಿಂ ಸುಳಿಸುಳಿದು ॥ ಹರಿಯದು ತೃಣವದು ಯಕ್ಷರಹಸ್ಯವ । ನರಿಯಗೆ ಪಿಂಜರಿದ ॥ ೬ ॥ ಮತ್ತಾ ವರುಣನು ಬಂದನು ಯಕ್ಷನ । ನುತ್ತರಿಸುವೆನೆಂಬ ॥ ಮತ್ತತೆಯಿಂದಲಿ ತೇಲಿಪ ಯತ್ನದಿ । ತತ್ತರಿಸಿದನಂದು ॥ ೭ ॥

ಭಾಮಿನಿ

ಬಳಿಕ ಬೆರಗಿನೊಳಿಂದ್ರ ತಾನೈ । ತರುತ ದೂರದಿ ಕಂಡ ಕ್ಷಣಗೊಳ । ಗುರುತರಾಕೃತಿ ಮೃಗರೆಯ ಮೃಗಣ್ಣ ಚಿಂತಿಸಿದ ॥ ಅರರೆ ಇಂತಾಯ್ತೇಕೆ ಕತವ । ನ್ನರಿಯೆನೆನುತಿರೆ ನಭದ ನುಡಿ ಎ । ಚ್ಚರಿಸಿತಾಗಳೆ ಕೇಳು ಕೇಳ್ಳೆ ನಾಕದಧಿಪತಿಯೇ ॥ ೧ ॥ ಆರ ಚೋದನ ಬಲದೊಳಪರಂ । ಪಾರ ವಿಶ್ವವು ಚಲಿಸುವುದೊ ಮ । ತ್ತಾರ ಚಾಲನದಿಂದೆ ಸಚರಾಚರಗಳಾಡುವವೊ ॥ ಈ ರಹಸ್ಯವ ನರಿಯದೀ ಪರಿ । ವಿಸರಿ ಮದಿಪಿನ ಸುರರ ಹರ್ಷ ವಿ । ದಾರಣವು ಸಂಭವಿಪುದರಿವುದು ಶೀಘ್ರದೊಳಗೆನುತ ॥ ೨ ॥

ಕೇತಾರ—ಅಷ್ಟ

ಬೆರಗಾಗಿ ಬಳಿಕ ಚಿಂತಿಸುತ್ತ ಶಕ್ರನು । ನೆರೆ ಯೋಚಿಸುತೆಂದನು ॥

ಪರಮ ಶಕ್ತಿಯುದಾಗೆ ಮರೆಯಾದುದೇಕೆ ನಾ । ಬರಲೆನ್ನ ಶೌರ್ಯಕಂಜಿ ॥೧॥ ಮರೆಯೊಳು ನಿಂತು ಚೇಷ್ಟೆಯನಾರೋ ಗೈದರಂ । ಬರವಾಣಿಯುಂತಿರಲಿ ॥ ಬರುವುದೇನೆನ್ನುತ ಪರಿಕಿಪೆ ಮುಂದೆಂದು । ಮರಳಿದ ಸ್ವಸ್ಥಾನಕೆ ॥ ೨ ॥

* * * * *

ಭೈರವಿ—ಜಂಪೆ

ಇತ್ತ ಮಾಯಾಪುರದಿ । ದೈತ್ಯಪರಿವಾರ ತಾ ಮತ್ತೆ ತಲೆಯೆತ್ತಿರಲು । ಸತ್ವಸಾಹಸದಿ ॥ ೧ ॥ ತಾರಕಾತ್ಮಜತ್ರಯರು ತಾರಾಕ್ಷ ತಾಮ್ರಾಕ್ಷ । ವೀರ ವಿದ್ಯುನ್ಮಾಲಿ । ಘೋರಿ ಶೌರ್ಯದೊಳು ॥ ೨ ॥ ಏರು ಜವ್ವನವಡೆದು ರಾರಾಜಿಸಿರಲೊಮ್ಮೆ । ತಾರಾಕ್ಷ ತಮ್ಮದಿರೊಳೀರೀತಿ ನುಡಿದ ॥ ೩ ॥ ಲಾಲಿಪುದು ಸೋದರರು ಶೂಲಿಯಾತ್ಮಜನಿಂದ । ಪೇಳಲೇನೆಮ್ಮ ಪಿತ । ಕಾಲಗತಿಯೈದೆ ॥ ೪ ॥ ಮೇಲಾದರಾ ಸುರರು ಸೋಲವಾದುದು ನಮಗೆ । ಏಳಿಗೆಯ ಪಥವನಿನ್ನಾಲೋಚಿಸುವುದು ॥ ೫ ॥

ಸೌರಾಷ್ಟ್ರ—ತ್ರಿವುಡೆ

ಆ ನುಡಿಗೆ ತಾಮ್ರಾಕ್ಷನೆಂದನು । ದಾನವರ ಕುಲದೈವ ಶಂಕರ । ಹೀನತನದಿಂ ಸುರರ ಪಕ್ಷವ । ತಾನು ತಳೆದ ॥ ೧ ॥ ತನ್ನ ಭಕ್ತರನಿಂತು ಕುಹಕದಿ । ಮಣ್ಣುಗೂಡಿಪ ದುಷ್ಟ ದೈವದ । ಘನ್ನಗತಕವನರಿತು ಭಜಿಪುದೆ । ಇನ್ನು ಮುಂದೆ ॥ ೨ ॥ ಮತ್ತೆ ವಿದ್ಯುನ್ಮಾಲಿ ನುಡಿದನು । ದೈತ್ಯ ಕುಲದೀಪಕರೆನಿಸುತಲೆ । ಪೃಥ್ವಿ ಮೂರನು ಗೆಲ್ಲಬೇಹುದು । ಯತ್ನದಿಂದೆ ॥ ೩ ॥ ಹಿರಿಯರೆಸಗಿದ ಕೀರ್ತಿಗೋಪುರ । ಕಿರಿಸಬೇಕೈ ವರಸುವರ್ಣದ । ಮೆರೆವ ಕಲಶ ತ್ರಯವ ವಿಕ್ರಮ । ದುರುಬಿನಿಂದ ॥ ೪ ॥

ಕೇತಾರ – ಅಷ್ಟ

ಸೋದರರೆಂದುದ ಕೇಳಿ ತಾರಾಕ್ಷ ಸ । ಮ್ಮೋದದಿ ಮತ್ತೆಂದನು ॥ ಆದುದಾಗಲಿ ಮುಂದೆ ಮೇಲ್ಮೆಯ ಸಾಧಿಪ । ಹಾದಿ ಶೋಧಿಸಬೇಕಿನ್ನು ॥ ೧ ॥ ಹಿಂದೆ ಸುರಾಸುರ ರೊಂದಾಗುತಾ ಕ್ಷೀರ । ಸಿಂಧುವ ಮಥಿಸಿದಂದು ॥ ಚೆಂದದೊಳುದಿಸಿದ ಸುಧೆಯನ್ನು ಕೈತವ । ದಿಂದ ಬರ್ಹಿಲರುಂಡರು ॥ ೨ ॥ ವಿಕ್ಕದ ಪೀಯೂಷ ರಕ್ಕಸರ್ಗೆಂದಿಗು । ದಕ್ಕದಂದದೊಳದನು ॥ ಚೊಕ್ಕದಿ

ಭಾಂಡದೊಳಿರಿಸಿ ಚಂದ್ರಮನದ । ರಕ್ಷಿಸುತಿರುವನಂತೆ ॥ ೩ ॥ ಚಂದ್ರನ ತುಡುಕಿ ನಾವಮೃತವನುಣಲು ಮ । ತ್ತೆಂದಿಗು ಮರಣವುಂಟೆ ॥ ಮುಂದೆ ತ್ರಿಲೋಕವ ಗೆಲ್ದು ಮೆರೆವುದಕೆ । ಸಂದೇಹ ಲೇಶವುಂಟೆ ॥ ೪ ॥

ಶಂಕರಾಭರಣ—ಮಟ್ಟೆ

ಅಗ್ರಭವನ ನುಡಿಗೆ ಭಳಿರೆಯೆಂದರನುಜರು । ಶೀಘ್ರದಲ್ಲೇ ಸೋಮ ನನ್ನು ಸುಲಿವುದೆಂದರು ॥ ಲಗ್ಗೆಗಾಗಿ ಸಕಲ ಸನ್ನಹವನು ಎಸಗುತ । ನುಗ್ಗಿ ನಡೆದರಿಂದು ಲೋಕಕವರು ಮಸಗುತ ॥ ೧ ॥

ಸೌರಾಷ್ಟ್ರ—ತ್ರಿವುಡೆ

ಖಳರು ಧಾಳಿಯನೆಸಗೆ ಕಾಣುತ । ಘಳಿಲನೈತಂದೆಂದ ಹಿಮಕರ । ನಿಳೆಯು ತೊರೆದೀ ಚಂದ್ರಲೋಕವ । ತುಳಿದಿರೇಕೆ ॥ ೧ ॥ ಇದುವರೆಗೆ ಈ ಸೋಮಲೋಕಕೆ । ಮದಮುಖರು ಕಾಲೂರದಿರಲೀ । ವಿಧದಿ ಮುತ್ತಿದಿ ರೇಕೆ ಪೇಳ್ವುದು । ವಿದಿತವಾಗೆ ॥ ೨ ॥ ಅದಕೆ ಪೇಳ್ದನು ತಾರಕಾಕ್ಷನು । ವಿಧುವೆ ಕೇಳೈ ನಿನ್ನ ರಕ್ಷಣೆ । ಗೊದಗಿರುವ ಸುಧೆಯನ್ನು ನೀಡೈ । ಮೊದಲು ನಮಗೆ ॥ ೩ ॥ ಏನಿದೀ ಭ್ರಮೆ ನಿಮಗೆ ಸುಧೆಯನು । ನಾನು ನೀಡುವ ಬಗೆಯದೆಂತೈ । ಪಾನ ಗೈವಧಿಕಾರವಿಹುದೇ । ದಾನವರಿಗೆ ॥ ೪ ॥ ಬಾಯ ಮುಚ್ಚೆಲೊ ಬರಿದೆ ನ್ಯಾಯಾ । ನ್ಯಾಯವಾ ವಾಡಲು ಬೇಡವಮೃತದ । ಪೇಯ ಸಲ್ಲಲಿ ನಮಗೆ ಈ ಕ್ಷಣ । ದಾಯವಾಗಿ ॥ ೫ ॥ ಮರುಳೆ ಪೀಯೂಷ ವನು ನೆರೆ ಸ್ವೀ । ಕರಿಪ ಯೋಗ್ಯತೆಯೆಂತು ಬಹುದೈ । ಸುರೆಯ ನೀಂಟಲು ಸಾಲದೇ ಮೈ । ಮರೆಯಲಿನ್ನು ॥ ೬ ॥ ಎಲೆ ಮೃಗಾಂಕನೆ ನಿನ್ನ ಚರಿತೆಯು । ತಿಳಿಯದವರಾವಲ್ಲ ಗುರುವಿನ । ಲಲನೆಯನು ವಂಚಿಸಿದ ಬಾಹಿರ । ಸಲುವೆ ಯೆಂತೈ ॥ ೭ ॥ ದೇವಗಡಣದೊಳಿರ್ಪ ಜೀವನ । ಭಾವ ಮಹಿಮೆಯನರಿಯ ಲಾಪಿರೆ । ಆ ವಿವರವಂತಿರಲಿ ದುಡುಕಲು । ಸಾವಿರಿಂದು ॥ ೮ ॥ ಸಾವರಲ್ಲವು ಸಾವ ಮೀರುತ । ದೇವ ತತಿಯನು ಗೆಲ್ವ ಹಂಬಲ । ಕೋವಿ ಬಂದೆವು ಗೆಲ್ದು ಬಾಳ್ವೆವು । ಠೀವಿಯಿಂದ ॥ ೯ ॥

ಭಾಮಿನಿ

ಪಡಿಗರೊಂದಾಗುತ್ತ ಶಶಿಯನು । ತುಡುಕಿ ಕೊಸಲು ಸತ್ವಗುಂದಿದ । ನಡಿಗಡಿಗೆ ಶೀತಾಂಶು ಚಿಂತಿಸಿ ತನ್ನೊಳಗೆ ಬಳಿಕ ॥ ಕಡು ಮದಾಂಧರು

ಸುಧೆಯು ಭಾಂಡವ । ಪಡೆವ ಮುನ್ನವೆ ಮೃಗಧರನೆಸೆದಂ । ಹಿಡಿದು ಕಳಿಯಲು ಧಾವಿಸಿದ ಗುಪ್ತದಿ ಮೃಡನೆ ಗತಿಯೆಂದು ॥

ಕಾಂಭೋಜಿ—ಜಂಪೆ

ಅಡಗಲಾ ರಜನೀಶನಿಂತು ಮತ್ತಾ ಮಿಳಲು । ಬಿಡಬಾರದೆ ವಂಚಕನ ನಿಂದು ॥ ಪಡುಕ ಬೇಕಿಲ್ಲಿರ್ದರವನ ಮರ್ದಿಸಿ ಸುಧೆಯು । ಕೊಡವನೆಳೆದೊಡನೆ ತರಬೇಕು ॥ ೧ ॥ ಎಂದೆನುತ ಮರಳಿದರು ಮಗುಳೆ ಮಾಯಾಪುರಕೆ । ಚಂದಿರನು ಬಳಿಕ ಬಾನಿಳಿದು ॥ ನಂದಿವಾಹನನೆನಗೆ ಇಂದು ಗತಿಯೆನುತ ನಡೆ । ತಂದನಾ ಕೈಲಾಸಗಿರಿಗೆ ॥ ೨ ॥ ಗಿರಿಜೆಯರಸನ ಚರಣಕೆರಗಿ ನುತಿಸುತ ನಿಶಾ । ಕರನೆಂದ ತನ್ನ ಪರಿಭವವ ॥ ಒರೆಯಲೇನಂಬರದಿ ತಿರುಗಲೆದೆಯಿಲ್ಲ ಧೂರ್ತರ ತಾರಕಾತ್ಮಜರ ದೆಸೆಯಿಂ ॥೩॥ ಎಂತು ರಕ್ಷಿಪೆನಮೃತ ಭಾಂಡವನು ಪೇಳ್ವುದೆನೆ । ಕಂತುವೈರಿಯು ಕುಮುದ ಪ್ರಿಯನ ॥ ಸಂತವಿಸುತೆಂದ ಬಲು ನೊಂದೆಯಾ ಚಂದ್ರಮನೆ । ಚಿಂತೆಯನು ತೊರೆವುದೈ ನೀನು ॥ ೪ ॥ ನಿನ್ನೊಳಿಹ ಕಲಶದೊಳಗಿನ್ನುಳಿದ ಸುಧೆಯನ್ನು ನಿನ್ನೊಳಗೆ ಲೀನಗೊಳಿಸುವುದು ॥ ಎನ್ನ ಮುಡಿಯೊಳಗೆ ನಾ ನಿನ್ನ ಕಾಯುವೆ ನೀ । ನಿನ್ನು ಭಯವೀಡಾಡು ಎನಲು ॥ ೫ ॥ ಧನ್ಯನಾದೆನು ದೇವ ಎಂದು ಪಾದಕ್ಕೆರಗೆ । ಪನ್ನಗಾಭರಣ ತಾನೊಲಿದು ॥ ಜೊನ್ನಗದಿರನನೆತ್ತಿ ಮುಡಿಗೆ ಸೂಡಿದನಂದು । ತನ್ನೊಂದು ತೊಡವಿನಂದದಲಿ ॥ ೬ ॥ ವ್ಯೋಮಕೇಶನು ಇಂತು ಸೋಮಧರನೆಂದೆನಿಸ । ಲಾಮಹಾ ದಾನವತ್ರಯರು ॥ ಸೋಮನಂತಿರಲಿನ್ನು ಬಲು ಘೋರ ತಪದಿಂದೆ । ಹೇಮಗರ್ಭನ ನೊಲಿಪೆವೆಂದು ॥ ೭ ॥

ವಾರ್ಧಿಕ

ತರಿಸಂದು ಮೂವರೊಂದಾಗಿ ಬಳಿಕತಿ ಜವದಿ । ಪುರವರವನುಳಿದತಿ ಭಯಂಕರ ವನಾಂತರಕೆ । ತೆರಳುತಂ ಪಂಚಾಗ್ನಿಮಧ್ಯದೊಳಗೇಕಪಾದದಿ ನಿಂತು ತಪಿಸುತಿರಲು ॥ ಕರಟಿದುದು ಕಾನನಂ ಬರುತುದೈ ಶರನಿಧಿಯು । ಸುರಲೋಕ ತಲ್ಲಣಿಸೆ ತುಹಿನಗಿರಿ ಬಿಸುಪೇರೆ । ವರುಷ ಸಾಸಿರವಿಂತು ಕಳೆಯೆ ಕಮಲಾತ್ಮಜಂ ಮೈದೋರ್ದ ದಿತಿಜರಿಂಗೆ ॥ ೧ ॥

ಸುರುಟಿ—ಏಕ

ದಿತಿಕುಲ ಭೂಷಣರೆ । ಮೆಚ್ಚಿದೆ । ವಕುಲ ಬಲಾನ್ವಿತರೆ ॥ ಅತಿ

ಭಕ್ತಿಯು ಬಗೆಗೋತೆನು ಮನದಿಂ । ಗಿತವನು ಸುಡಿಸ್ವುದು ಹಿತದಿಂದೆನ್ನೊಳು ॥ ೧ ॥

ಕಾಂಭೋಜಿ—ಜಂಪೆ

ಬಂದೆಯಾ ಭಕ್ತ ಬಂಧುವೆ ಧನ್ಯನಾದೆವೆಲೆ। ತಂದೆ ಕೇಳೆಮ್ಮ ಬಿನ್ನಪವ ॥ ಮುಂದಕನುಪಮ ಕೀರ್ತಿ ಪೊಂದಿ ನಿತ್ಯೈಶ್ವರ್ಯ । ದಿಂದೆ ಬಾಳುವ ಹದನ ವೆಸಗೈ ॥ ೧ ॥ ಮೂರು ಲೋಕವ ಜೈಸಿ ಮೀರಿ ಮರಣವ ನಭದಿ । ಚಾರು ತರ ಪುರ ಮೂರನೆಸಗಿ ॥ ಬೇರೆ ಬೇರಾಗಿ ಸಾಸಿರವರ್ಷ ಮಂಡಲಾ । ಕಾರದಿಂ ಸಂಚರಿಸುತಿರ್ದು ॥ ೨ ॥ ವರುಷ ಸಾಸಿರಕೊಮ್ಮೆ ಚರಿಪ ಮುಪ್ಪೊಳಲುಗಳು । ಬರೆ ಮೂರು ಮುಕ್ಕಾಲುಗಳಿಗೆ॥ ಸರಿಪಂಕ್ತಿ ಗೈತರಲು ಏಕದಿಂ ಸೋದರರು । ಸರಳದಿಂದಿರುವಂತೆ ಪರಸೈ ॥ ೩ ॥

ಸುರುಟಿ—ಏಕ

ದೈತ್ಯಾಗ್ರಣಿಗಳಿರ । ಮನಕರಿ । ಪಾಯ್ತು ನುಡಿದ ವಿವರ ॥ ಪೃಥ್ವಿಯು ಸಚರಾಚರಕಳಿವುಂಟೀ । ತತ್ತ್ವವ ಮೀರ್ವರೆ ಸತ್ಯ ನಿಯತಿಯುದು ॥ ೧ ॥ ಪುರಮೂರಂಬರದಿ । ಚರಿಸುತ । ಲಿರೆ ಮರಣದ ಹಾದಿ । ಬರದಾದರು ಸಾಸಿರ ಕಾಲದಿ ನೀವ್ । ಸರಿಸಕೆ ಬರಲೆಚ್ಚರದಿಂದಿರ್ಪುದು ॥ ೨ ॥

ಕಾಂಭೋದಿ—ಜಂಪೆ

ಮೂವರೊಂದಾಗಿರಲು ಆವನೆಮಗಿದಿರಾಂತು । ಸಾವ ಕಲ್ಪಿಸುವನೈ ತರಲಿ ॥ ಈ ವಿಧದಿ ಸಂಧಿಯೊಳಗೊಂದೆ ಬಾಣದೊಳೆಮ್ಮ । ಜೀವ ಪೋದರೆ ಪೋಗಲಂದು ॥ ೧ ॥

ಭಾಮಿನಿ

ಶರಜಭವನು ತಥಾಸ್ತು ತ್ರಿಪುರಾ । ಸುರರು ನೀವೆಂದೆನಿಸಿ ಲೋಕದಿ । ಪರಮ ಕೀರ್ತಿಯನಾಂತು ಮೆರೆಯುವಿರಖಿಳ ಭುವನದಲಿ ॥ ಧರೆಯ ಧರಿಸಿದ ಧರ್ಮವನು ಧಿ । ಕ್ಕರಿಸದಿರಲು ಅಜೇಯರಪ್ಪಿರಿ । ಅರಿವುದಿದನೆಂದ ಜನು ಅಂತರ್ಧಾನವಾಗಲ್ಕೆ ॥ ೧ ॥

ಮಾರವಿ — ಏಕ

ವರಬಲದಲಿ ಹುರಿಯೇರುತ ದನುಜರು । ಹರುಷದಿ ಬೊಬ್ಬಿರಿದು ॥ ಸರಿತವಗಿನ್ನಾರೆನ್ನುತ ಲೈ ತಂ । ದರು ನಿಜಪುರಕಾಗ ॥ ೧ ॥ ಮೂರು

ಜಗಂಗಳ ಜೈಸುವ ಮತ್ತಾ । ಮೂರು ಪುರಂಗಳಲಿ ॥ ಭೂರಿ ವಿಶೇಷದಿ ಲೋಕವನಾಳುತ । ಶೂರರೆನಿಪ್ಪದಿನ್ನು ॥ ೨ ॥ ಬಲು ವೈಚಿತ್ರ್ಯದೊಳೊಪ್ಪುವ ತ್ರೈಪುರ । ಗಳನಂಬರದೊಳಗೆ ॥ ಥಳಿಲನೆ ನಿರ್ಮಿಪ ವರ ಶಿಲ್ಪಿಯ ನೀ । ಗಳಿಗೆಗೆ ಕರೆಸುವುದು ॥ ೩ ॥

ಭಾಮಿನಿ

ತ್ವರಿತದಿಂ ದೂತನನು ಕಳುಹುತ । ತರೆಸೆ ಶಿಲ್ಪಿ ವರೇಣ್ಯ ಮಯನೈ । ತರಲು ತಾರಕತನುಜರಾತನನುಪಚರಿಸೆ ಬಳಿಕ ॥ ಹರುಷದಿಂ ಮಯನೆಂದ ನೆಮ್ಮನು । ಕರೆಸಿದಭಿಮತವೇನೆನಲು ಮ । ತ್ತೊರೆದ ಮನದಭಿಲಾಷಿತವ ತಾರಾಕ್ಷನವನೊಡನೆ ॥ ೧ ॥

ಬೇಗಡೆ—ಅಷ್ಟ

ದನುಜ ಶಿಲ್ಪಿವರೇಣ್ಯ ಕೇಳಯ್ಯ । ಮನದೊಳಿಹುದೊಂದನು । ನಿನಗೆ ಪೇಳ್ವೆನಪೂರ್ವ ಸಂಗತಿಯ ॥ ದನುಜ ಸಂಘದ ಹಿಂದೆಮರಬಲ । ವನುಪಹೆದೆ ವಿನ್ನೆಮಗೆ ಗಗನದೊ । ಳನವರತ ಸಂಚರಿಪ ತ್ರೈಜಗ । ವಿನುತ ತ್ರಿಪುರಂಗಳನು ಸೃಜಿಸೈ ॥ ೧ ॥ ಒಂದು ಕನಕದೊಳೊಂದು ರಜತದಲಿ । ಮತ್ತೊಂದು ಕರ್ಬುನ । ದಿಂದ ರಚಿಪುದು ಬಲು ವಿಚಿತ್ರದಲಿ । ಒಂದು ಮುಂದಿಲ್ಲದ ಮಹಾದ್ಭುತ । ಸ್ಯಂದನದ ತೆರ ಚರಿಪ ಪುರಗಳ । ಕುಂದು ಕೊರತೆಗಳಿಲ್ಲದಂದದೆ । ಬಾಂದಳದೆ ನಿರ್ಮಿಸುತ ನಿಲ್ಲಿಸು ॥ ೨ ॥

ಸಾಂಗತ್ಯ—ರೂಪಕ

ನಯದಿ ಬಿನ್ನಹ ಗೈಯೆ ಮಯನದಕೆಂದ ನಿ । ರ್ಭಯದಿ ನಿರಾತಂಕವಾಗಿ । ಅಯನಗೈವಾಕಾಶಗಮನ ಶಕ್ತಿಯಪುರ । ತ್ರಯವ ಸೃಜಿಪೆ ನಿಮಗಾಗಿ ॥ ೧ ॥ ಭೂತ ಭವಿಷ್ಯದೊಳೀತೆರವಿಲ್ಲೆನೆ । ನೂತನಾದ್ಭುತ ರೀತಿಯಾಗಿ ॥ ಚಾತುರ್ಯ ದೋರೆ ಸೃಷ್ಟಿಪೆ ಶೀಘ್ರದಲಿ ದಿತಿ । ಜಾತರೆಲ್ಲರು ಬಗೆಗಾಗಿ ॥ ೨ ॥ ಮೂರು ಸಾವಿರ ಯೋಜನಾಂತರದತುಳ ವಿ । ಸ್ತಾರ ದಾಗಿರ್ದವರೊಳಗೆ । ಮೀರಿದ ಸಕಲ ಸಂಪದವಿರ್ಪ ಸ್ವೇಚ್ಛಾ ಸಂ । ಚಾರ ಶಕ್ತಿಯನಳವಡಿಸಿ ॥ ೩ ॥ ಮಿಗೆ ಯಂತ್ರ ತಂತ್ರ ವಿಚಿತ್ರ ಸಾಧನಗಳ ಬಿಗದ ಜಾಣಿಕೆಯ ಜೋಡಿಸಿಯು । ತಿಗುರಿಯ ತೆರ ತಿರುಗಲಿರ್ಪುದು ಗಗನದಿ । ಸ್ವಗತದಪ್ಪುದು ಬಯಸಲ್ಕೆ ॥ ೪ ॥ ತ್ರೈಪುರಗಳನಿಂತು ಸಿದ್ಧಗೊಳಿಸಿ ಮಯ । ನಾ ಪರಂತಪ

ವೈತ್ಯಗೀಣಯೆ ॥ ಭಾಷ್ಪರೆ ಮಯನೆ ಮೆಚ್ಚಿದೆವಯ್ಯ ಶಿಲ್ಪ ಕ । ಲಾಪ ಲೋಕೋತ್ತರವಾಯ್ತು ॥೫॥ ಸೃಷ್ಟಿಗಪೂರ್ವ ಬ್ರಹ್ಮನ ಸೃಷ್ಟಿಗಿದು ಪ್ರತಿ । ಸೃಷ್ಟಿಯೆಂದೆನಿಸಿತು ಭಳಿರೆ ॥ ಇಷ್ಟಾರ್ಥ ಸಾಧನವಾಯ್ತೆಂದು ಪೊಗಳುತ । ಕೊಟ್ಟರು ಬಹಳುಚಿತಗಳ ॥ ೬ ॥

ಕಾಂಭೋದಿ – ಜಂಪೆ

ತಾರಾಕ್ಷ ಬಳಿಕೆಂದ ತಮ್ಮದಿರೆ ಪುರತ್ರಯವ । ನಾರೋಹಣವ ಗೈವ ಡೀಗ ॥ ಸಾರಿ ಬಂದಿದೆ ಸಮಯ ಸೈನ್ಯ ಪರಿವಾರ ಸಂ । ಭಾರಗಳ ಸಹಿತ ಲೈದುವುದು ॥ ೧ ॥ ಅಮಿತ ಬಲ ತಾವಾರ್ರಕ್ಷನೆಂದನಜಸೃಷ್ಟಿ ದಿ । ಗ್ಭ್ರಮೆ ಯಪ್ಪ ತೆರದಿ ಧಾವಿಸುತ ॥ ಸಮುಗೆಡಿಸಿ ರವಿ ಶಶಿಯ ಗ್ರಹತಾರೆಗಳ ಗಮನ । ದಮನವೆಸಗಲು ಬೇಕು ಜವದಿ ॥ ೨ ॥ ಬಳಿಕವಿದ್ಯುನ್ಮಾಲಿ ನಲವಿನಿಂದಲಿ ಪೇಳ್ದ । ಗೆಲಬೇಕು ಮೊದಲು ನಾಕವನು ॥ ಗಳಿಸಬೇಕಮರಾವತಿಯ ಭೋಗವನ್ನಾಂತು । ಛಲದಂಕರೆನಿಸಿ ಮೆರೆಯುವುದು ॥ ೩ ॥ ತಾರಾಕ್ಷನದಕೆ ನಗುತೆಂದ ನುಡಿ ಲೇಸಾಯ್ತು । ಮೂರು ಲೋಕಕೆ ಮೂವರಾವು ॥ ಘೋರ ನಾಕ್ರಮಣ ಗೈವುತ ಲೋಕದಿಗ್ವಿಜಯ । ಭೇರಿಯನು ಮೊಳಗಿಸಲು ಬೇಕು ॥ ೪ ॥ ನಾಕಕ್ಕೆ ತಾನು ಮೃತ್ಯಕ್ಕೆ ತಾವಾರ್ರಕ್ಷ ಕೆಳ । ಲೋಕ ವಿಜಯಕೆ ವಿದ್ಯುನ್ಮಾಲಿ ॥ ಸಾಕೋರ್ವರೊಂದೊಂದು ಲೋಕವನೆ ಕೊಳಲು ತಡ । ವೇಕೆನಲು ಖರೆಯೆಂದರೆಲ್ಲ ॥ ೫ ॥

ಭಾಮಿನಿ

ಬಳಿಕಲಾಟೋಪದಲಿ ತ್ರೈಪುರ । ಗಳನು ಸಜ್ಜಾಗಿಸುತ ಲಂಬರ । ತಳಕೆ ಚಿಮ್ಮಿಸೆ ಕೋಟಿಸಿಡಿಲಬ್ಬರದಿ ಬಡಿಮದೆನೆ ॥ ತೊಳ ತೊಳಗಿ ಗರಗರನೆ ತಿರುಗುತ । ಬಲು ವಿಚಿತ್ರದೊಳಲೆಯೆ ಭುವನಾ । ವಳಿಯ ಹೃದಯದಿ ಭೀತಿಜ್ವರವೇರಿದುದನೇನೆಂಬೆ ॥ ೧ ॥

ಸೌರಾಷ್ಟ್ರ – ತ್ರಿವುಡೆ

ತಾರಕಾಕ್ಷನು ಸ್ವರ್ಣ ಪುರವ । ನ್ನೇರಿ ವಿಜೃಂಭಿಸುತ ಸ್ವರ್ಗದ । ದ್ವಾರ ದೇಶಕೆ ಬರಲು ಕಂಡಾ । ದ್ವಾರ ಭಟರು ॥೧॥ ಸಾರಿ ವೇಗದೊಳಮರ ನಾಥಗೆ । ದೂರಿ ಕೊಂಡರು ಮರಳಿ ನಾಕಕೆ । ಮಾರಿಸುಗ್ಗಿ ದೆಯುವುದು ಬಲುಗ್ರಹಚಾರವಾಯ್ತು ॥ ೨ ॥

ಮುಖಾರಿ—ಏಕ

ಚಿತ್ರವಿಸುವುದಯ್ಯ ನುಡಿಯು । ಓ ದಿವಿಜರೊಡೆಯ । ಚಿತ್ರಿಸುವು ದೇನು ಜೀಯ ॥ ಮಿತ್ರೆಯನ್ನುಯ ಸುರಲೋಕಕೆ ದುರುಳರು । ಮತ್ತೆ ತೆಯಿಂ ದದೊ ಮುತ್ತಿಗೆ ಗೈದರು ॥ ೧ ॥ ತಾರಕತನುಜ ದನುಜರಂತೆ । ತ್ರಿಪುರಾ ಸುರ । ಘೋರಿ ಶೌರ್ಯಾಗ್ರಗಣ್ಯರಂತೆ ॥ ಮೂರು ಪುರಂಗಳ ನಿರ್ಮಿಸಿ ಬಲು ಸೊ । ಕ್ಕೇರುತ ಹಾರಾಡುತ್ತಿಹರವುವೂ ॥ ೨ ॥ ದುರುಳರ್ಗೆ ಒಬ್ಬನಿಹ ನಂತೆ । ತಾರಾಕ್ಷನೆಂದು । ಕರೆಸಿಕೊಂಬ ಮದಗರ್ವಿಯಂತೆ ॥ ಭರದಿಂ ಗಸ್ತ್ರನೆ ತಿರುಗುವ ಚಿನ್ನದ । ಪುರದೊಂದಿಗೆ ಬಂದೆರಗಿಹ ಸ್ವರ್ಗಕೆ ॥ ೩ ॥

ಸೌರಾಷ್ಟ್ರ—ತ್ರಿವುಡೆ

ಚರರ ವಾಕ್ಯವ ಕೇಳ್ದು ರೋಷದೊ । ಳರರೆ ಕೇಳ್ದಿರೆ ತ್ರಿದಶರೆಲ್ಲರು । ಪೊರಮಡುವುದೀ ಕ್ಷಣದಿ ದುರುಳರ ತರಿವ ಬಗೆಗೆ ॥ ೧ ॥ ವರುಣ ವಾಯು ಕುಬೇರರೆಲ್ಲರು । ದುರುಳರನು ಭಂಗಿಸುವ ಬಗೆಗತಿ । ತ್ವರಿತದಿಂ ಧಾವಿಸಲು ಬಲುಸಂ । ಗರವು ಮಸಗೆ ॥ ೨ ॥ ಈ ತೆರದಿ ವಸಾರಾಂತು ಸುರದಿತಿ । ಜಾತರೆಚ್ಚಾಡುತಿರಲು ಪುರು । ಹೂತನನು ಸಂಧಿಸುತ ಕರ್ಬುರನಾಪ್ತನೆಂದ ॥ ೩ ॥

ಭೈರವಿ—ಏಕ

ಪ್ರಾತುರೆ ಸಿಕ್ಕಿದೆ ಮೃಷವ । ರಣ । ದಾತುರನನು ಬಿಡು ವಿಷ್ಣುವೆ ॥ ಸಾತಿಶಯದೊಳೊಪ್ಪಿಸುತ । ನಿ । ನೋಂತಿರುವುದು ತರಣಿಸುತ ॥ ೧ ॥ ತಾರಕತನುಜನೆ ನೀನು । ಬಂ । ಗಾರದ ನಗರದ ಖಳನು ॥ ಈ ರೀತಿಯ ಭ್ರಮೆ ಯಾಕೋ । ಪಿತ । ಸಾರಿದ ಲೋಕವು ಬೇಕೋ ॥ ೨ ॥ ಪಿತನನು ಕೊಲಿಸಿದ ಧೂರ್ತ । ನಿನ । ಗತಿಶಯವಾದು ಸ್ವಾರ್ಥ ॥ ಪ್ರತಿಗೈಯಲು ಬಂದಿಹನು । ದು । ರ್ಗತಿ ಕಾದಿದೆ ನಿನಗಿನ್ನು ॥ ೩ ॥ ಮರುಳು ಮದಾಂಧನೆ ಬರಿದೆ । ಕನ । ವರಿಸುತ ಮೃತ್ಯುವ ಕರೆದೆ ॥ ಕರದ ಕುಲಿಶದಿನೊ ಶಿರವ । ಸಾ । ಸಿರ ಹೋಳಿಸಗುವುದರಿಯಾ ॥ ೪ ॥

ಭಾಮಿನಿ

ಘೋರ ಸಂಗ್ರಾಮದೊಳು ರಾಕ್ಷಸ । ವೀರನುರೆ ನೊಂದ್ಗೈಯೆ ದಿವಿಜರ ಸುರ । ವಾರ ಸಹಿತಮರೇಂದ್ರ ಶರಣಾಗತಿಯನೈದುತಲಿ ॥ ಶೂರ ಸ್ವರ್ಣ

ಪುರೇಂದ್ರ ನಿನ್ನಲಿ । ಹೋಲುವವರಾರುಂಟು ಪೌರುಷ । ವಾರಿಧಿಯೆ ಕಾರುಣ್ಯ ಭಾವದಿ ಪೊರೆಯಬೇಕೆಂದ ॥ ೧ ॥

ಸಾಂಗತ್ಯ—ರೂಪಕ

ಬಗೆ ಬಗೆಯಿಂದಲಿ ಮಘವನೀ ಪರಿಯೊಳು । ಪೊಗಳಲು ಸಂಪ್ರೀತನಾಗಿ ॥ ವಿಗಡ ವಿಕ್ರಮನೆಂದೆನಿಪ್ಪ ದಾನವ ನಿನ್ನ । ಬಗೆದೆನಾಶ್ರಿತನೆಂದು ದಯದಿ ॥ ೧ ॥ ಅದರಿಂದಿಹುದೆನ್ನ ನಿರ್ಬಂಧವಾಲಿಸು । ಈ ದಿವಿಯಷ್ಟ ಭೋಗವನು ॥ ಮೋದದಿ ತವಸತಿ ಶಚಿ ಸಹಿತೆನ್ನಗೆ । ಸಾದರದಿಂದೊಪ್ಪಿಸುವುದು ॥ ೨ ॥ ಅದಕೆ ಬೆಚ್ಚುತಲೆಂದ ಸುರಪನಕಟ ಇಂಥ । ಹದನವ ನೀನಾಡಬಹುದೆ ॥ ಕದನದಿ ಗೆಲ್ದೊಡೆ ಸುದತಿಯ ಬಯಸುವು । ದಿದು ಧರ್ಮವಪ್ಪುದೆ ಪೇಳು ॥ ೩ ॥ ಸುರಪಾಲ ಪಟ್ಟವ ಪಡದೆನ್ನ ಪಕ್ಕದಿ । ವರಪಟ್ಟ ಮಹಿಷಿಯೆಂದೆನಿಸಿ ॥ ಎರಕದಿಂದಿರಬೇಕೆನ್ನೊಡನಿದು ಸಹಜವು । ಕರೆತರುದಿಂದ್ರಾಣಿಯನ್ನು ॥ ೪ ॥ ಶುಚಿ ಶೀಲೆ ಶಚಿಗೆ ನೀ ಮನಮಾಡದಿರು ಕುಂಭ । ಕುಚೆಯರನಾ ರಂಭಾದಿಗಳ ॥ ನಿಚಯದೊಡನೆ ಸೊಗವುಂಡು ತಣಿವುದೆನ್ನ । ಸುಚರಿತೆ ಸತಿಯನುಳಿವುದು ॥ ೫ ॥

ಸೌರಾಷ್ಟ್ರ—ತ್ರಿವುಡೆ

ದೇವಲೋಕದ ಶೀಲ ಶುಚಿಗಳ । ಭಾವವನು ನಾ ಬಲ್ಲೆನಲ್ಲವೋ । ಭಾವಕಿಯು ತಾಂದೊಪ್ಪಿಸೀಕ್ಷಣ । ದೇವಪತಿಯೆ ॥ ೧ ॥ ಒಲ್ಲೆಯಾದರೆ ನಿನ್ನ ಬಂಧನ । ದಲ್ಲಿ ಬಿಗಿಯುತ ನೀನೆ ನೋಡಲು । ಫುಲ್ಲನೇತ್ರೆಯು ಶಚಿಯುಪಡೆವೆನು । ನಲ್ಲೆಯಾಗಿ ॥೨॥ ಎಂದು ಜಂಕಿಸೆ ಬಿಡುವನಲ್ಲವ ಮುಂದ ಮತಿಯೆನುತಿಂದ್ರ ತಾಮು । ತ್ವಂದ ಸತಿಯೊಳು ಕೇಳಿ ತಿಳಿವೆನು । ಒಂದು ಮಾತ ॥ ೩ ॥ ಎನಲಿದೇತರ ಮಾತೊ ಸತಿಯೊಳು । ಕ್ಷಣದಿ ಶಚಿಯನೊಪ್ಪಿಸಾಕೆಯ । ಮನವನೊಲಿಪೆನು ದಕ್ಕಲಿನ್ನಾ । ವನಿತೆ ನಿನಗೆ ॥ ೪ ॥ ಏನು ವಿಧಿಯೋಗ ಟಿಯೊ ಎನುತಲಿ ॥ ಮಾನಸದಿ ಮರುಗುತ್ತ ಮಘವನು । ಮಾನಿನಿಯ ಮಂದಿರಕೆ ಬಂದನು । ಮ್ಲಾನನಾಗಿ ॥ ೫ ॥

ಕೇತಾರ—ಜಂಪೆ

ಕಂದಿದಾನನದಿಂದಲಿ । ಸುತ್ರಾಮ । ಬಂದನರಮನೆಗೆ ಬಳಲಿ ॥ ಇಂದುಮುಖಿ ಶಚಿ ಕಾಣುತ । ತಾನೆದ್ದು । ಬಂದೆಯಾ ನಾಥಯೆನುತ ॥ ೧ ॥

ಉಪಚರಿಸಲಿಂದ್ರಸೇವ । ಮನದನ್ನೆ ವಿಪರೀತ ವಿಧಿಯು ಬಂಧ ॥ ಅಪಸವ್ಯ ವಾಯ್ತು ಯೋಗ । ದನುಜನಿಂ । ದಪಜಯವು ಬಂದುದೀಗ ॥ ೨ ॥ ಪರಿ ಭವವನರಿತೆ ನಾನು । ಈ ಪೋಪಲು । ತೋರೆನುದಿಲ್ಲವೆ ದಿವಿಜನು ॥ ಮರೆ ಯೊಳಿಲ್ಲಾದರಡಗಿ । ಕಾಯುತ್ತ । ಲಿರುವ ಶುಭಯೋಗಕಾಗಿ ॥೩॥ ಏನೆಂಬೆ ಪ್ರಾಣಕಾಂತೆ । ಅಡಗುವ ದಿ । ಧಾನವಿರದಿಹುದೆ ಚಿಂತೆ ॥ ದಾನವನ ಮನ ದೊಳಕೆಯು । ಪೇಳಲೇಂ । ಹಾನಿಯಾಯ್ತೆಲ್ಲ ಕಾರ್ಯ ॥ ೪ ॥ ಮಾತರಿಯು ಲಿಲ್ಲ ಮನಕೆ । ದಾನವನಿ । ಗೇತರದು ಮನಸಿನೇಕೆ ॥ ಓತು ನೀ ತಿಳುಹು ಯೆನಗೆ । ಹಿಂಜರಿವು । ದೇತಕೆನಿತೋರೆವ ಬಗೆಗೆ ॥ ೫ ॥

ಸಾವೇರಿ—ರೂಪಕ

ಕೇಳೆನ್ನ ಶಚೀ ವಿಮಲ ರುಚೀ । ಸನ್ನುತಾಂಗಿಯೇ । ಬನ್ನದೊಂದು ಬಗೆಯು ಪೇಳ್ವೆ । ನೆನ್ನ ರಾಣಿಯೇ । ಆ ಘೋರ ದೈತ್ಯ ತಾರಕಾಕ್ಷ । ಮೀರಿ ಮದದಲಿ । ನಾರಿ ನಿನ್ನ ಬಯಸಿಹುದನು । ಯಾರೊಳೆನ್ನಲಿ ॥ ೧ ॥ ನಾನಾಗಿ ನಿನ್ನ ನೀಡದಿರೆ ತಾನಾಗಿ ತುದಿಸುತ । ದಾನಹಾನಿ ಗೈಯುದಿರನು ಹೀನನಾ ಗುತ ॥ ಏನಾಡಲಿನ್ನು ಪ್ರಾಣನಿಧಿಯು ನೀಡುವುದೆಂತು । ಮೂಢ ರಕ್ಕಸನಿಗೆ ದಯವು ಮೂಡುವುದೆಂತು ॥ ೨ ॥

ಭಾಮಿನಿ

ಸುರಪನಿಂತೊರೆಯಲ್ಕೆ ಹಾಹಾ । ಪರಮ ಪಾಪಿಯು ಬಯಸಿದನೆ ನಾ । ದೊರಕುವವಳೇ ದನುಜನಿಗೆ ನೀ ಮರುಗದಿರು ಮನದಿ ॥ ಹರಿಯು ಪೊರೆಯುವನೆಮ್ಮನೆರೆಯನೆ । ತೆರಳಿ ಬಹೆನಾ ದಾನವೇಂದ್ರನ । ಪೊರೆಗೆನುತ್ತ ಪುಲೋಮಜೆಯು ಪತಿಪದಕೆರಗಿ ಪೋದಳ ॥ ೧ ॥

ಕಾಪಿ—ಅಷ್ಟ

ಬರಲು ದೂರದೆ ಕಾಣುತಾಗ । ದೈತ್ಯ । ನುರೆತೋಷದಲಿ ಪೇಳ್ದನಿದೆ ಶುಭ ಯೋಗ ॥ ಅದರೆ ಏನೆಂಥ ಲಾವಣ್ಯ । ಈ । ತರಳೆಯು ತನಿನೋಟವಿದು ಘನಪುಣ್ಯ ॥ ೧ ॥ ಬಂದೆಯಾ ಬಾರೆ ಇಂದ್ರಾಣಿ । ದೂರ । ನಿಂದೆಯೇತಕೆ ಬಳಿ ಬಾರೆನ್ನ ರಾಣಿ ॥ ಚಂದವಾಯಿತು ಈ ಸುಸಂಧಿ । ಇನ್ನು । ಮುಂದೆ ನೀನೆನ್ನನುರಾಗದ ಬಂಧಿ । ೨ ॥

ಆನಂದಭೈರವಿ—ರೂಪಕ

ದನುಜೇಂದ್ರ ನಿನ್ನಯ ಮನದನುಸರಿತೆನು । ಘನ ಪರಾಕ್ರಮಿ ನೀನು ಖರೆಯು ॥ ನಿನಗಿಂತ ಚಪಲ ಸಲ್ಲದೆ ವಿಚಾರಿಸು ಪರ । ವನಿತೆಯ ಬಯಕೆಯು ತರವೇ ॥ ೧ ॥

ಕಾಪಿ—ಅಷ್ಟ

ಕಮ್ಮ ಗೋಲನ ಮರಿಯಾನೆ । ಇಂತು । ಸುಮ್ಮನೆ ಧರ್ಮದ ಶ್ರವಣ ವಿದೇನೆ ॥ ಸುಮ್ಮಾನದಿಂ ಬಳಿ ಸಾರೆ । ಆಹ । ಗಮ್ಮನೆ ಸುಖಿಸೆಲೆ ಪ್ರೇಮ ಮಂದಾರೆ ॥ ೧ ॥

ಆನಂದಭೈರವಿ—ರೂಪಕ

ದಾನವ ಪತಿ ಮಾತನೊಂದ ನಡೆಸುವೆಯ । ಮಾನವತಿಯು ನಿನ್ನ ಸತಿಯು ॥ ತಾನೆ ಎನ್ನೊಳು ನಿನ್ನ ಸತಿಯಾಗಬೇಕೆ ನ । ಲಾ ನಂದದಿಂ ಸೇರ್ವೆ ನಿನ್ನ ॥ ೧ ॥

ಕಾಪಿ—ಅಷ್ಟ

ಹಿತದ ಮಾತಮದೆಲೆ ಒನ್ನೆ । ಮಮ । ಸತಿಯನು ಮೋದಿಪಳೆನ ಮಾತನ್ನೆ ॥ ಪತಿವ್ರತೆ ಮತಿಯುತೆಯುವಳು । ಎನ್ನ । ನತಿಕ್ರಮಿಸಳು ನಿನ್ನ ನೊಲಿಪಳು ಕೇಳು ॥ ೧ ॥

ವಾರ್ಧಿಕ

ಎಂದು ಮತ್ತಾದನುಜ ಸ್ವರ್ಣಪುರಕೈತರಲ್ । ಬಂದಿದಿರ್ಗೊಂಡೆರಗಿ ಮುದದಿ ತಾರಾಮಣಿಯು । ಚೆಂದದಿಂದುಪಚರಿಸು ತಿರಲೆಂದ ತಾರಾಕ್ಷ ತನ್ನಯ ತಳೋದರಿಯೊಳು ॥ ಮಂದಗಾಮಿನಿ ಕೇಳು ಮತವಾಯ್ತು ಸ್ವರ್ಗದಾ । ನಂದ ಭೋಗಗಳೆಲ್ಲವಾವಡೆನ್ನಯ ಮನಕೆ । ಬಂದುದೊಂದಭಿಲಾಷೆ ನಿನ್ನೊಳೀರೆಯುಲು ಬಂದೆ ಸಲ್ಲದಿಮ ನಿನ್ನಂಪಲೀ ॥ ೧ ॥

ಕೇತಾರ—ಜಂಪೆ

ಸಂತೋಷವಾಯಿತೆನಗೆ । ಸ್ವರ್ಗವದು ಬಂತೆ ಕೈವಶಕೆ ನಮಗೆ ॥ ಕಾಂತ ಮನದೆಣಿಕೆಯೇನು । ಮತ್ತದನು । ಅಂತರಿಸದುಸುರು ನೀನು ॥ ೧ ॥

ಸಾಂಗತ್ಯ—ರೂಪಕ

ಮಡದಿ ಕೇಳೆಲೆ ನಾಕದೊಡೆಯನೆನಿಸಿ ತಾನು । ಬಿಡುಗಣ್ಣರೊಡೆಯನ ಸತಿಯು ॥ ಪಡೆಯದಿರ್ದರೆ ಫಲವೇನೆಂಬ ಯೋಚನೆ । ಯುಡರಿದುದೆನ್ನಯ ಮನಕೆ ॥ ೧ ॥ ಸುರಪನು ಕೆಳದಲ್ಲಿ ತರುಣಿಯು ಬಂದು ತಾ । ನೊರೆದಳು ನೀನಾಕೆಯೊಡನೆ ॥ ಬೆರೆತೆನ್ನ ಬಾಳ್ವಂತೆ ಅರುಹಿದಮಾದೊಡೆ । ಪರುಷದಿ ಬಹಳಂತೆ ಶಚಿಯು ॥ ೨ ॥

ಕೇತಾರ—ಜಂಪೆ

ಎರೆಯ ನೀನೆಂಬುದೇನು । ನಿನ್ನಂಥ ಪುರುಷರ್ಗೆ ಶೋಭೆಯೇನು ॥ ಪರ ಪತ್ನಿಗಳಪಿ ಪಿಂತೆ । ಬಹುಮಂದಿ । ದುರಿತಕೀಳ್ಗಾದರಂತೆ ॥ ೧ ॥

ಸಾಂಗತ್ಯ—ರೂಪಕ

ಇಂದ್ರ ಪದವಿಗೇರಲಿಂದ್ರ ಪತ್ನಿಯು ಕ್ರಮ । ದಿಂದ ಭಾರ್ಯೆಯು ಯೆನಿಸುವಳು ॥ ಕುಂದದೆ ನೀವಿಬ್ಬರೊಂದಾಗಿ ಸಂಸಾರ । ಬಂಧುರತೆಯ ಕಾಣಿಸುವುದು ॥ ೧ ॥

ಕೇತಾರ—ಜಂಪೆ

ಸವತಿ ಮಾತ್ಸರ್ಯವಿಲ್ಲ ಆದೊಡೇಂ । ಸುವಿವೇಕ ಕೃತಿಯಿಂದಲ್ಲ ॥ ಅವಿವಾಹಿತೆಯರ ನೂರ । ವರಿಸೆ ನಾ । ನವರ ಸ್ವಾಗತಿಪೆ ಧೀರ । ೧ ॥

ಭಾಮಿನಿ

ಘನ ಪತಿವ್ರತೆಯವಳ ನಾಶಿಪ । ಕನಸು ಸಲ್ಲದು ನೀನೆ ಯೋಚಿಸು । ಎನಗೆ ಸಮನಿಸಲಿಂಥ ದಂದುಗ ನಿನಗೆ ಸನುಮತವೇ ॥ ಜಿನುಗುತಿಹ ಕಂಬನಿಯೊಳಿಂತಾ । ವನಿತೆ ಪೇಳಲ್ಕ ಸುರ ನಾಥನ । ಮನವು ಕರಗಿದುದಿಲ್ಲ ಪಿಂತಿರುಗಿದನು ಕ್ರೋಧದಲಿ ॥ ೧ ॥ ಮರಳಿ ಶಕ್ರಾಣಿಯನು ತಾನೇ । ಮರುಳುಗೈವೆನೆನುತ್ತ ಬಂದಾ । ತರುಣಿಯನು ವಿಧವಿಧದಿ ಸಮುಭಯಂಗಳಲಿ ನುಡಿಸಲ್ಕೆ । ಒರೆದಳಾಕೆಯು ದನುಜವೀರನೆ । ವರಮುರಾ ಕಾತ್ಯಾಯಿನೀ ವ್ರತ ಧರಿಸಿಹೆನು ನಾ ಪೂಜೆಯನು ಪೂರೈಸಿ ಪೇಳುವೆನು ॥ ೨ ॥

ನಾದನಾಮಕ್ರಿಯೆ—ಅಷ್ಟ

ಆಗಲಾಗಲಿ ಎಂದಸುರನು । ವೃತ್ರ । ಸಾಗಲಿ ತಡೆವಲ್ಲೆಂದನು ॥

ಬೇಗದೊಳರ್ಚನೆ ಮುಗಿಸುತ್ತ । ಸಾಸು । ರಾಗದಿ ಧಾವಿಸಿ ಬಾರಿತ್ತ ॥ ೧ ॥
ನಡುವೆ ನುಡಿಸಬಾರದೆನ್ನುತ । ಶಚಿ । ಮೃಡನರಸಿಯು ಪೂಜೆ ತೊಡಗುತ್ತ ॥
ಎಡೆಬಿಡದರ್ಚಿಸುತಿರಲಂದು । ದೈತ್ಯ । ನಡಿಗಡಿಗಾಯೆಡೆಗೈತಂದು ॥ ೨ ॥
ಮುನ್ನ ಪೇಳ್ದಂತೆ ನುಡಿಸದಿನ್ನು । ಸಲೆ । ಸನ್ನೆ ಮಾಡುತ್ತಲಿಂಗಿತವನ್ನು ॥
ಕಣ್ಣು ಕೈ ಕರಣದೊಳರು ಹಲ್ಕೆ । ಶಚಿ । ಕಣ್ಮುಚ್ಚಿ ತನ್ಮಯಳಾಗಲ್ಕೆ ॥ ೩ ॥

ಭಾಮಿನಿ

ಬಾಲೆ ತಾನನುಕೂಲೆಯಾಗುವ । ಕಾಲವನು ಕಾಯುವೆನು ಬರಿದೇ । ವೇಳೆಗಳೆವುದೆ ಮುನ್ನಡೆಯಿಸುವೆ ಸ್ವರ್ಣದುರ್ಗವನು ॥ ಪಾಳಿಯಲಿ ಮಿಕ್ಕಿದ ನೆಗಳ್ದಾ । ಮೇಲು ಲೋಕಂಗಳಿಗೆ ಶೀಘ್ರದಿ । ಧಾಳಿಗೈದಲ್ಲೋಲ ಕಲ್ಲೋಲವನು ಗೈಸುವೆನು ॥ ೧ ॥

ಘಂಟಾರವ — ಜಂಪೆ

ಸುರಪನನು ಕಂಡೆಂದ ಶಚಿಯು ಪೂಜೆಯು ಮುಗಿಯೆ । ಬರುವೆನೊಂದಾವರ್ತವೆಸಗಿ ॥ ದೊರೆತನವನೊಪ್ಪಿ ನೀನಿರುವುದಮರಾವತಿಯು । ಪುರದೊಳೆಂದವಗೆ ನೇಮಿಸಿದ ॥ ೧ ॥ ಬಲುವಿಧ ಸುವಸ್ತುಗಳ ಕಾಣಿಕೆಯು ಕೈಕೊಂಡು । ಖಳನು ಸೇರ್ದನು ಸ್ವರ್ಣಪುರವ ॥ ಬಳಿಕ ಬರ್ದಿಲರಾಣ್ಮ ಬೀಸು ಬಡಿಗೆಯು ತಲೆಯ । ನುಳಿಸಿತೆಂದನು ಯೋಚಿಸುತ್ತ ॥ ೨ ॥ ಮೂರು ಮೂರ್ತಿಗಳೊಲವು ಪೂರ್ಣಮಿರದಿರೆ ಮುಂದೆ । ತಾರಕಾತ್ಮಜನಂಕೆಯನ್ನು ॥ ಮೀರಲುಂಟೇ ದರ್ಪದೋರಿ ಕೆಟ್ಟೆನು ದಯವ । ತೋರುವುದು ಮೂರ್ತಿ ತ್ರಯಗೆನಗೆ ॥ ೩ ॥

*　　*　　*　　*　　*

ಸೌರಾಷ್ಟ್ರ—ತ್ರಿವುಡೆ

ಇತ್ತಲಾ ತಾಮ್ರಾಕ್ಷ ಬೆಳ್ಳಿಯ । ಚಿತ್ರರದ ಪತ್ತನವ ನಡರುತ । ಮರ್ತ್ಯ ಲೋಕವ ಸುತ್ತುತಿರ್ದನು । ಮತ್ತತೆಯುಲಿ ॥೧॥ ಹೋಮನೇಮವ ಜಾತ್ರೆ ವ್ರತಗಳ । ನಾಮ ನಿರ್ಮೂಲನವ ಗೈಯುತ । ತಾಮಸದಿ ಕೆಡಿಸಿದನು ತೀರ್ಥ । ಸ್ತೋಮವನ್ನು ॥ ೨ ॥ ಹವಿಯನುಂಡರೆ ಸುರರು ಬಲ ತೇ । ಜವನು ಪಡೆವರು ಎನುತ ಭುವಿಯಲಿ । ಹವನ ಹೋಮಾದಿಗಳ ವರನೇ । ಮವನು ಮುರಿದ ॥

ಬೇಹಾಗ್ — ಏಕ

ಫಲಗಾಲದೆ ಮಳೆ ಸುರಿಯುವ ಬೇಗೆಯೊಳ್ । ಇಳೆ ನೊಂದಿರಲೊಂದೆಡೆಯಲ್ಲಿ ॥ ಮಳೆಗೋಸುಗ ಮಂಗಳಕರ ಯಜ್ಞವ । ಬಲು ಭಕ್ತಿಯೊಳೆಸಗುತ್ತಿರಲು ॥ ೧ ॥ ಬಂದನು ರಜತ ಪುರಾಸುರನಾ ಜನ । ವೃಂದವ ನೀಕ್ಷಿಸುತಿರಲೆಂದ ॥ ಮಂದ ಮತಿಗಳೀ ತಕೆ ತುಪ್ಪವನೋ । ರಂದದಿ ಬೆಂಕಿಗೆ ಸುರಿಯುವಿರಿ ॥ ೨ ॥

ಪೀಲು — ಅಷ್ಟ

ಅದಕೆಂದರಾ ಯಾಜಕರು ದಾನವನೊಳು । ಇದು ವರ್ಷಾಕರ್ಷಣ ಯಜ್ಞವು ಕೇಳು ॥ ವಿಧಿ ವಿಹಿತದೊಳಾಜ್ಯ ಹವಿಯರ್ಪಿಸಲು । ಮುದವಾಂತು ದಿವಿಜರು ಮಳೆಯಕಳೆವರು ॥ ೧ ॥

ಮಾರವಿ — ಏಕ

ಕೇಳುತದನು ಗಹಗಹಿಸುತ ದಿತಿಜನು । ಪೇಳಿದ ಮೂರ್ಖರಿರ ॥ ಆಳಾಗಿಹರಾ ಸುರರೆಮ್ಮಣ್ಣಗೆ । ಮೂಳರು ಕರುಣಿಪರೆ ॥ ೧ ॥ ಅರಿಯಿರೆ ಸಕಲ ಜಗಂಗಳು ತ್ರಿಪುರಾ । ಸುರರಂಕೆಯೊಳಿಹುವ ॥ ಹಿರಿದಾದರ ಹಿಂದೆಮ್ಮನು ನುತಿಸಲು । ಕರೆವೆವು ನಾವ್ ಮಳೆಯ ॥ ೨ ॥

ಪೀಲು — ಅಷ್ಟ

ಯಜನ ಯಾಗಗಳೆಲ್ಲ ಪೂರ್ವಪದ್ಧತಿಯು । ಅಜಪ್ಪನಾದಿಗಳನ್ನು ಭಜಿಪುದೆ ಹಿತವು ॥ ಸುಜನರ ಭಕ್ತಿ ರಚನಕೆ ವಿಘ್ನ ಸಲ್ಲ । ನಿಜರಲ್ಲಿ ಯಜ್ಞವ ನಿಲ್ಲಿಪರಲ್ಲ ॥ ೧ ॥—

ಮಾರವಿ — ಏಕ

ನಿಲ್ಲಿಸಿರೆಲಪ್ಪೋ ಖುಲ್ಲರೆ ಮಂತ್ರದ । ಸೊಲ್ಲನ್ನೀಕ್ಷಣದಿ ॥ ಸಲ್ಲದ ಯಜ್ಞವ ನಡೆಸುವಿರಾದಡೆ । ಕೊಲುವೆ ತಲೆಗಡಿದು ॥ ೧ ॥ ಕರವಾಳವ ಹಿರಿಹಿರಿದಾತನು ಮುಂ । ಬರಿಯುತ ಕಿಡಿಕಿಡಿ ॥ ತರಿದಿಕ್ಕಲು ಮಿಕ್ಕವರೆಲ್ಲರು ಹಾ । ಹರಹರ ಎಂದೋಡೆ ॥ ೨ ॥

ಭಾಮಿನಿ

ಮೊಳನಪ ತಾಪನ್ಯಾಕ್ಷ ಅಸ್ತಿತ । ಮೀಳಗೆಯು ಹಿಡಿಸುತ ಧರೆಯನು । ಗೋಳು ಗುಡಿಸುತ ಬರೆ ಸರಸ್ವತಿ ನದಿಯ ತಟಕೆ ॥ ಬಾಲೆಯಾಕೃತಿವಾಂತು

ನದಿ ಸ । ಲ್ಲೀಲೆಯಿಂದಿರೆ ಕಂಡು ಭ್ರಮೆಯಿಂ । ದಾಲತಾಂಗಿಯ ನುಡಿಸಿದನು ಶೃಂಗಾರ ವಚನದಲಿ ॥ ೧ ॥

ಕಾಪಿ—ಅಷ್ಟ

ಆ ದಿವ್ಯಾ ಕಾರೆಯ ನೋಡಿ । ಬಲು । ಚೋದಿಗವಟ್ಟು ತನ್ನಲ್ಲೆ ಕೊಂಡಾಡಿ ॥ ಮೋದದಿ ಬಳಿಗೈದಿ ನಯದಿ । ದೈತ್ಯ । ಸಾದರದಲಿ ನುಡಿಸಿದ ನೋಹ ಭರದಿ ॥ ೧ ॥ ಎಣೆಯಿಲ್ಲದಿಪ ಮುದ್ದು ರನ್ನೆ । ಚೆಲ್ವ । ಕಣಿ ಕಾಮನರಗಿಣಿ ನೀನಾರ ಕನ್ನೆ ॥ ಫಣಿ ಸುರ ಗಂಧರ್ವಾಂಗನೆಯೋ । ಗಾನ । ಗುಣುಗುಣಿಸುತ್ತಿರ್ಪ ವನದೇವತೆಯೋ ॥ ೨ ॥

ಹಿಂದೋಳ—ರೂಪಕ

ದಾನವನೀಪರಿ ನುಡಿಸಲ್ಕೆ ನದಿಯಭಿ । ಮಾನಿನಿ ದೇವಿ ನುಡಿದಳು ॥ ಈ ನಾರಿಯಾಕೃತಿ ನಿಜವಲ್ಲ ಕೇವಲ । ವೈನೋದಕೆಂದು ಕುಳ್ಳಿಹೆನು ॥ ೧ ॥

ಕಾಪಿ—ಅಷ್ಟ

ಅರಸಂಚೆ ನಡೆಯ ಓ ಬೆಡಗಿ । ನಾ । ನರಿಯದಾದೆನು ನಿಜವುಸುರು ನೀನಾಗಿ ॥ ವರಿಸಲು ಮೋಲ್ಮೆಯು ಬಾಲೆ । ತ್ರೈ । ಪುರ ವೀರರಲಿ ಮಧ್ಯ ಮನು ನಾನೆ ಕೇಳೆ ॥ ೧ ॥

ಹಿಂದೋಳ—ರೂಪಕ

ಪುರತ್ರಯ ಮಧ್ಯಮ ಪುರುಷಸಿಂಹನು ಎಂಬು । ದರಿತೆನು ಪೇಳ್ವೆ ನೆನ್ನಿರವ ॥ ಹರಿಯುವ ಸರಿತೆಯು ನಾನು ಸರಸ್ವತಿ । ವರಿಸುವೆನೆಂತು ಪೇಳಯ್ಯ ॥ ೧ ॥

ಕಾಪಿ—ಅಷ್ಟ

ಹರಿಯುವ ನದಿಯೇನೆ ನೀನು । ಎಮ್ಮ । ಪುರದೊಳಗೋರಂತೆ ಪ್ರವಹಿಪೆಯೇನು ॥ ಕರೆದೊಯ್ವೆನೀಗಲೆ ಬಾರೆ । ಬಲು । ಹರುಷದಿ ರಜ ತಾಖ್ಯ ಪುರವನು ಸೇರೆ ॥ ೧ ॥

ಹಿಂದೋಳ—ರೂಪಕ

ಧರೆಯೊಳಗಿಲ್ಲ ನಾ ಹರಿವ ಪಾತ್ರವ ಬಿಟ್ಟು । ಬರಲಾರೆ ನಿನ್ನಯ ಪುರಕೆ ॥ ಮರಳಾಟ ತೊರೆದು ನೀ ತೆರಳ್ವುದೆ ವಿಹಿತವೆಂ । ದೊರೆಯ ರೋಷದಿ ಪಲ್ಲವೊರೆದ ॥ ೧ ॥

ಸೌರಾಷ್ಟ್ರ—ತ್ರಿವುಡೆ

ಮೀರಿ ನುಡಿಯುತ್ತಿಹೆಯ ಸೊಕ್ಕಿನ । ನೀರೆ ನಿನ್ನಯ ಗತಿಯ ತಿರುಗಿಪ । ಶೂರ ಸೆಳೆದೊಯ್ಯಲ್ಕೆ ತಡೆಯುವ । ರಾರು ಇಲ್ಲಿ ॥ ೧ ॥ ಎಂದು ಮುಂದಡಿಯಿಡೆ ಸರಸ್ವತಿ । ಯಂದು ಕಣ್ಮರೆಯಾಗೆ ಖಳ ಬೆರ । ಗಿಂದ ನಾಲ್ದೆಸೆಯರಸಿ ಕಾಣದೆ । ಹಿಂದೆರಳಿದ ॥ ೨ ॥ ಇತ್ತ ಮೈಗರೆದಾ ಸರಸ್ವತಿ । ಗುಪ್ತ ಗಾಮಿನಿಯೆನಿಸಿದಳು ಹರಿ । ಯುಕ್ತ ಗಂಗಾಯಮುನೆಯರ ಕೂ । ಡುತ್ತ ತಾನು ॥ ೩ ॥

* * * * *

ಬೇಹಾಗ್—ಏಕ

ಮತ್ತೊಂದೆಸೆಯೊಳು ನೃತ್ಯ ಸುಗಾನದಿ । ಚಿತ್ತಾಕರ್ಷಕ ವೇಷ ದೊಳು ॥ ದೈತ್ಯಾರಿಯು ಲೀಲೆಯ ನಟಮೇಳವು । ಅರ್ತಿಯೊಳಭಿನಯಿಸು ತ್ತಿರಲು ॥ ೧ ॥ ನೋಟಕರಗಣಿತ ಕೂಟದಿ ನವರಸ । ದೂಟವನಾಸ್ವಾದಿಸು ತಿರಲು ॥ ಸೂಟಿಯೊಳಸುರರು ಮುನ್ನುಗ್ಗುತ ನಟ । ರಾಟದ ರಂಗಕೆ ದಿಂ ಕಿಡಲು ॥ ೨ ॥

ದ್ವಿಜಾವಂತ—ಜಂಪೆ

ಮೇಳ ನಾಯಕನೆಂದ ತರವಲ್ಲ ಹರಿಯು । ಲೀಲೆಯಂಭಿನಯವ ಭಂಗಿಸ ಲಾಗದಯ್ಯ ॥ ಶೀಲ ರುಚಿಗಳ ನೀವ ದಿವ್ಯ ಕೃತಿಯಿಂದನು । ಹಾಳು ಗೈಯು ವುದೆ ಚಾಕ್ಷುಷ ಯಜ್ಞವನ್ನು ॥ ೧ ॥

ಮಾರವಿ—ಏಕ

ಕೇಳಿಲೊ ನಟನೇ ಮೇಳವ ನೆರಹುತ । ಮೂಳ ಕತೆಗಳಾಡಿ ॥ ಬಾಳಿ ಸುಖಿರಿ ನಾವ್ ಬಲ್ಲೆವು ದನುಜರ । ಖೂಳರೆನುತ ಮಾಡಿ ॥ ೧ ॥

ದ್ವಿಜಾವಂತ—ಜಂಪೆ

ನೀತಿ ಧರ್ಮನ್ಯಾಯ ಸತ್ಯಗಳ ತುಳಿದ । ಪಾತಕಿಗಳನ್ನರಿದ ಸುಜನರನು ಪೊರೆದ ॥ ಪೀತಾಂಬರನ ಚರಿತೆಯನ್ನಾದೆ ಜಗದಿ । ಸಾತಿಶಯ ಸದ್ಧರ್ಮ ನೆಲೆಯಹುದು ಸ್ಥಿರದಿ ॥ ೧ ॥

ಮೋರವಿ—ಏಕ

ಮುಚ್ಚಿಲೊ ಪರಿ ಚರಿತೆಯನಾಡಲು ನಿ । ನ್ನಿಚ್ಛೆಯೊ ಕೇಳಲವ್ರೋ ॥ ಎಚ್ಚರಿಕೆಯೊಳೀ ತ್ರಿಪುರರ ಲೀಲೆಯು । ನೆಚ್ಚಿನೊಳಾಡುವುದು ॥ ೧ ॥

ಭಾಮಿನಿ

ಎಂದು ಸಿರ್ಬಂಧಿಸಲು ನಟರುಂಗ । ಳಂದು ಮಣಿದರು ಜೀವ ಭೀತಿಯ । ದಂಡುಗದೊಳಾ ಮಂದಮತಿಗಳ ಕಥೆಯನಾಡಲ್ಕೆ ॥ ೧ ॥

*   *   *   *   *

ಸೌರಾಷ್ಟ್ರ—ತ್ರಿವುಡೆ

ಇತ್ತ ವಿದ್ಯುನ್ಮಾಲಿ ಕರ್ಬುನ । ಪತ್ತನದೊಳಲೆಯುತ್ತ ರಸೆಯಿಂ । ದತ್ತ ಪಾತಾಳಕ್ಕೆ ಪೊಕ್ಕನು । ಧೂರ್ತತನದಿ ॥ ೧ ॥ ಭೋಗವತಿಯೊಳಗಖಿಳ ವಿಭವದಿ । ನಾಗ ಶ್ರೇಷ್ಠರ ಕೂಡಿ ಸಾವಿರ । ಭೋಗದಲಿ ಧರೆಯನ್ನು ಧರಿಸಿಹ । ನಾಗರಾಜ ॥ ೨ ॥ ಆದಿ ಶೇಷನು ಮೆರೆದಿರಲು ಬಳಿ । ಕಾದನುಜ ಬಾಗಿಲಿನ ನಾಗರ । ಪೋದು ತಟ್ಟಲು ಅರಿಕೆಗೈದರು । ರೋದಿಸುತ್ತ ॥ ೩ ॥ ನಾಗಭಟರೆಂದುದನು ಕೇಳುತ । ತೂಗಿ ಹೆಡೆಯನು ಶೇಷನೆಂದನು । ಬೇಗಿ ಬಂದರೆ ರಕ್ಕಸರು ರಣ । ಕಾಗಿ ಭರದಿ ॥ ೪ ॥ ಡುಂಡುಭನು ಎಂದೆಂಬ ಸೇನಾ । ಮಂಡಲಾಧಿಪಗಾಜ್ಞೆಯೀಯಲು । ಪುಂಡು ರಕ್ಕಸನನ್ನು ಮರ್ದಿಪ ಚಂಡತನದಿ ॥ ೫ ॥

ಭೈರವಿ—ಏಕ

ಬರಲಾತನ ಕಾಣುತ್ತ । ಕ । ರ್ಬುರ ಸೇನಾಪತಿ ನಗುತ ॥ ಉರಗ ಭಟನೆ ಕೇಳೆಲವ್ರೋ । ಸಂ । ಗರದಲಿ ಸಾಯುವ ಬಲವ್ರೋ ॥ ೧ ॥ ಎನಲಾ ಡುಂಡುಭನೆಂದ । ಇಂ । ತನಕಿಸಬೇಡೆಲೊ ಮೂಢ ॥ ಘನಲೋಕವ ಗೆಲುವಾಸೆ । ಎಲೊ । ಬಣಗು ದಿತಿಜ ಬಯಲಾಸೆ ॥ ೨ ॥ ವಕ್ರಗಮನ ಕೇಳಲವ್ರೊ । ಆ । ಶಕ್ರನ ಗೆಲಿದವರಾವ್ರೊ ॥ ಚೊಕ್ಕನ ನುಡಿ ಸಾಕಿನ್ನು । ತಂ । ದಿಕ್ಕುವುದೈ ಕಪ್ಪವನು ॥ ೩ ॥ ಕಪ್ಪದಿ ಮಾತಂತಿರಲಿ । ಹೆಡೆ । ಯಪ್ಪಳಿಸಲು ಕ್ಷಣದಲ್ಲಿ ಕುಪ್ಪಳಿಸುತ್ತಲಿ ಮಡಿವೆ । ಈ । ಸರ್ಪನ ಶಕ್ತಿಯನರಿವೆ ॥ ೪ ॥

ಯುದ್ಧ—ಶೇಷ × ವಿದ್ಯುನ್ಮಾಲಿ

ಪಂತುವರಾಳಿ—ಮಟ್ಟೆ

ಪೂತುರೇ ಸಿಕ್ಕಿದೆಯ ಶೇಷನೆ । ಸಂಗ್ರಾಮಕೆ ನೀ । ನೋಡು ಬಂದಿರುವೆಯ ಸುಮ್ಮನೆ ॥ ಏಕಿಂಥ ವ್ಯರ್ಥಯತ್ನ । ಸೋತು ತೊಳಲಿ ಸಾವುದಕ್ಕೆ । ಆತುರವೇ ಭೋಗವತಿಯ । ಸಾತಿಶಯದಿ ಒಪ್ಪಿಸೀಗ ॥ ೧ ॥ ಏನೆಲಾ ಮದಾಂಧ ರಾಕ್ಷಸ । ಈ ನಾಗಲೋಕ । ಕೇನು ಬಂದೆ ವಿಷಮ ಸಾಹಸ ॥ ದಾನವರನು ಕೂಡಿಕೊಂಡು । ಹೀನ ಲೋಭದಿಂದ ಬಾಳ್ವ । ಕ್ಷೋಣಿಯನ್ನು ತೊರೆದು ಇಲ್ಲಿ । ಗೇನು ಬಂದೆಯುಗಡುತನದಿ ॥ ೨ ॥ ಧೀರ ತ್ರಿಪುರರನ್ನು ತಿಳಿಯೆಯಾ । ತ್ರೈಪುರವ ಕಟ್ಟಿ । ಮೂರು ಭುವಿಯ ಗೆಲುವ ಬಯಕೆಯ ॥ ಪೂರಯಿಸಲು ಬಂದೆವೆಮಗೆ । ಮಾರೊಡ್ಡಿ ನಿಲುವವರ ಕಾಣೆ ಭೋರನಖಿಳ ರತ್ನಾದಿಗಳ । ನಾರಿಗಡಣ ಸಹಿತ ನೀಡೊ ॥ ೩ ॥ ಸಾಕು ಸಾಕು ಶೌರ್ಯ ದಾರ್ಭಟ । ಈ ತ್ರಿಪುರ ಭ್ರಮಣ । ವೇಕೊ ಲೋಕ ಕಂಟಕದ ಹಟ ॥ ಲೋಕ ನಿಯಮ ಬಾಹಿರರು ನಿ । ಮ್ಮಾಕೆವಾಳತನವದಿರಲಿ । ಜೋಕೆ ಬಲಿಯ ಫೂತ್ಕಾರದಲಿ । ಸಾಕೆಂದೆನಿಸಿಬಿಡುವೆ ಕ್ಷಣದಿ ॥ ೪ ॥

ಭಾಮಿನಿ

ಕಾಳಗವ ಮಸಗಲ್ಕೆ ಮತ್ತಾ । ಖೂಳ ಮೇಲ್ಗೈಯೆನಿಸೆ ಶೇಷನು । ಕಾಲಗತಿಯನು ನೆನೆದು ಶರಣಾಗತಿಯನೈದುತಲಿ ॥ ಸೋಲನೊಪ್ಪಿದೆನೆಲೆ ಅಯಸ್ಪುರ । ಪಾಲ ಮರ್ಜೆಯ ನೀನರುದು ಛಲಿ । ಮೇಲೆನಿಪ ಕಪ್ಪಗಳ ಕೊಳ್ಳುತ ಪಾಲಿಪುದು ಎನಲು ॥ ೧ ॥

ಸಾಂಗತ್ಯ—ರೂಪಕ

ಭೋಗವತಿಯೊಳುಳ್ಳಮೋಘ ವಸ್ತುಗಳನ್ನು । ನಾಗಕನ್ನಿಕೆಯರ ಸಹಿತ ॥ ಬೇಗದೊಳಸುರಗರ್ಪಿಸಲುತ್ತೋಷದಿ ಶರ । ಣಾಗಿ ಬಾಳುವುದೆಂದ ನವಗೆ ॥ ೧ ॥ ಸಾಸಿರ ಹೆಡೆಯನ ಜೈಸಿ ವಿದ್ಯುನ್ಮಾಲಿ । ಆ ಸುವಸ್ತುಗಳನೆಲ್ಲ ವನು ॥ ಲೇಸಾಗಿ ಕರ್ಬುನ ಪುರಕೊಯ್ದು ತಾನಟ್ಟಿ । ಹಾಸದಿ ಮತ್ತೆ ಮುಂದರಿದ ॥ ೨ ॥

* * * * *

ಅರ್ಥವಾರ್ಧಕ

ತ್ರಿಪುರಾಸುರರು ಲೋಕಲೋಕಾಂತರದೊಳಿಂತು । ವಿಪರೀತ ಕೃತ್ಯ

ಗಳನೆಸಗೆ ಶಕ್ರಾದಿಗಳ್ । ಅಪರಿಮಿತ ಶೋಕದೊಳುಂ ಗುಪಿತದಿಂ ಕ್ಷೀರಾಬ್ಧಿ ಯೆಡೆಗೈದಿ ಮೊರೆಯಿಟ್ಟರು

ಪಹಡಿ—ಅಷ್ಟ

ಶರಣಯ್ಯ ಕರುಣಾಲವಾಲ । ಅವ । ಧರಿಪುದು ಹೇ ಲಕ್ಷ್ಮೀಲೋಲ । ಸರ್ವ । ದುರಿತಾಪಹರ ಭಕ್ತ ಪಾಲ । ಭಕ್ತ । ವರದ ಶ್ರೀಕರದ ಭಯುವ ತೋರುತೆಮ್ಮನು । ಪೊರೆವುದು ದುರುಳರ ತರಿದತಿ ಶೀಘ್ರದಿ ॥ ೧ ॥ ಬಲು ವಿಧದಿಂದ ಶ್ರೀ ಹರಿಯು । ಸ್ತುತಿ । ಗಳ ಗೈಯೆ ತಳೆದಾಗ ದಯೆಯು । ಕಂ । ಗಳಿಗೆ ಕಾಣಿಸೆ ನೀಲಕಾಯು । ಸುರ । ಬಳಗವೆಲ್ಲವು ದೇವ ಶರಣು ಶರಣು ಎನ । ಲೊಲಿದು ಮಂದಸ್ಮಿತ ತಳೆದೆಂದ ನಳಿನಾಕ್ಷ ॥ ೨ ॥

ಕಲ್ಯಾಣಿ—ಅಷ್ಟ

ಏಳಿರೈ ಸುಮನಸರೇ । ದುಷ್ಟರ ಕೃತ್ಯ । ತಾಳಲಾರದೆ ಬಂದಿರೆ ॥ ಗೋಳಾಟವರಿತಿಹೆ ತಾಳಿರೈ ಧೈರ್ಯವ । ಕಾಲವೊದಗುತಿದೆ ಖೂಳರ ಹನನಕೆ ॥೧॥ ದುರುಳರಾ ತ್ರಿಪುರರನು । ಸಂಹರಿಸಲು । ಗಿರಿಜಾವಲ್ಲಭ ಬಲ್ಲನು । ತೆರಳ್ವುದು ವರರಜತಾದ್ರಿಗೆ ನೀವೆಲ್ಲ । ಪರಮೇಶಗೆರಗಿ ಬಿನ್ನಹವನ್ನು ಗೈವುದು ॥ ೨ ॥ ಬೇರೊಂದು ಬಗೆಯಿಂದಾನು । ದುಷ್ಟರ ಸತ್ವ । ಸಾರವ ಕ್ಷೀಣಿಪೆನು ॥ ಘೋರ ದಾನವರ ಸಂಹಾರಕೆ ಹರಿಹರ । ನೀರಜಭವರೆಲ್ಲರೊಂದಾಗಲಿಹುದಯ್ಯ ॥ ೩ ॥

ಮಧುಮಾಧವಿ—ತ್ರಿವುಡೆ

ಎಂದು ಸುರರನು ಬೀಳ್ಕೊಡುತ್ತರ । ವಿಂದನಾಭನು ನಾರದನ ತಾ । ನಂದು ನೆನೆಯಲು ಸುರಮುನಿಯು ನಡೆ । ತಂದು ಪುರುಷೋತ್ತಮನಿಗೆ । ವಂದಿಸಲ್ಕೆ ॥ ೧ ॥ ನಾರದನನುಪಚರಿಸಿ ಬಳಿಕಾ । ವಾರಿಜಾಕ್ಷನು ನುಡಿದ ತ್ರಿಪುರರ । ವಾರತೆಯ ನೀನರಿವೆಯಲ್ಲವೆ । ಕ್ರೂರರಂತ್ಯಕೆ ದಾರಿಯ । ತೋರುವುದಕೆ ॥ ೨ ॥ ಮಾರುವೇಷವ ತಳೆದು ತ್ರಿಪುರರ । ಭೂರಿ ಸತ್ವವ ಕೆಡಿಸುತವರ್ಗಳ । ನಾರಿಯರ ಪತಿ ನಿಷ್ಠೆಯೊಮ್ಮೆಗೆ । ಜಾರುವಂದವನೆಸಗಲು । ಸಾರಬೇಕೈ ॥ ೩ ॥ ಧರಿಸುವೆನು ಚಾರ್ವಾಕ ವೇಷವ । ನಿರದೆ ನೀನನುಸರಿಸು ಶಿಷ್ಯನ । ತೆರದೊಳೆನೆ ಹರ್ಷದಲಿ ನಾರದ । ವರಿಸಿ ನಿಂದನು ವೇಷವ । ಹರಿಯು ಕೂಡೆ । ೪ ॥

ಆರಭಿ—ರೂಪಕ

ಗುರು ಶಿಷ್ಯರಾಗುತ್ತ ಚಾರ್ವಾಕವಾದವ । ಸೋರೆಯು ಬಂದರು ಸ್ವರ್ಣ ಪುರಕೆ ॥ ನೆರವಿಯನಾಕರ್ಷಿಸುವ ಚಾರುವಾಕನೊ । ಳಿರದೆ ಗಂಭೀರ ವಾಣಿ ಯಲಿ ॥ ೧ ॥ ಕೇಳಿರೆಲ್ಲವರು ನಾವ್ ಪೇಳುವ ಮತವಿದು । ಈ ಲೋಕ ಸುಖಕೆ ಸಾಧನವು ॥ ಸಾಲವ ಗೈದು ತುಪ್ಪವನು ಭುಂಜಿಸುವುದೆ । ಮೇಲಾದ ನೀತಿಯು ಜಗದಿ ॥ ೨ ॥ ಈದೇಹ ಸುಖವೊಂದೆ ಪರಮು । ಲಕ್ಷ್ಯವು ಸಟೆ । ಸಟೆ । ಯಾವ ಶಾಸ್ತ್ರಗಳನ್ನೆ ನಂಬಿ ॥ ಮೋದವನುಳಿದು ಮೋಕ್ಷವ ನೆಚ್ಚಿ ಮೂರ್ಖರು । ಬೂದಿಯಾದರು ವ್ಯರ್ಥವಾಗಿ ॥ ೩ ॥ ಪುರುಷಾರ್ಥವೆರಡೆ ಅರ್ಥವು ಕಾಮವೆಂಬುದ । ನರಿತು ಸಾಧಿಪುದು ಜೀವನದಿ ॥ ಮರುಳಾಟದಿಂ ಜಪತಪ ಹೋಮ ನೇಮದಿ । ಸೊರಗಿ ಸಾವುದು ಜಾಣತನವೆ ॥ ೪ ॥

ಭಾಮಿನಿ

ಚಾರುವಚನದಿ ಜನತತಿಯ ಮನ । ವೇರು ಪೇರಾಗಲ್ಕೆ ಸಂಭ್ರಮ । ದೋರಿ ತಾರಾಮಣಿಯ ದಾಸಿಯು ತನ್ನೊಡತಿಯೆಡೆಗೆ ॥ ಸಾರಿ ಪೇಳ್ದಳು ತಾಯೆ ನಮ್ಮಯ । ಊರಿಗೈತಂದಿಹ ಮಹಾತ್ಮನ । ಕೀರುತಿಯ ನೇನೆಂಬೆ ಪೂರ್ವದ ಪುಣ್ಯವಿದು ನಮಗೆ ॥ ೧ ॥

ಶಂಕರಾಭರಣ—ರೂಪಕ

ಚಾರುವಾಕನೆಂಬನೋರ್ವ ಭೂರಿಮಹಿಮನು । ಸಾರಿ ಬಂದನೆಮ್ಮ ಪುರಕೆ ಶಿಷ್ಯ ಸಹಿತನು ॥ ತೋರುವನು ಸುಜ್ಞಾನಪಥವ ತನ್ನ ತತ್ವದಿ । ಹಾರಯಿಸುತ ಕೇಳ್ವರೆಲ್ಲ ಬಹಳ ತೋಷದಿ ॥ ೧ ॥ ಮಗುಳೆ ಕೇಳಬೇಕೆನಿಸುವ ಮಾತಿನಂದವು । ಸೊಗದ ಸೋನೆ ಬಾಳಿಗಾನಂದ ಗಂಧವು ॥ ವಿಗಡ ಸನ್ಯಾಸಿ ಯಲ್ಲ ನೋಡೆ ಸುಂದರ । ಜಗದೊಳಿಂಥ ಧರ್ಮ ಬೇರೊಂದಿಲ್ಲ ಬಂಧುರ ॥ ೨ ॥

ಸೌರಾಷ್ಟ್ರ—ತ್ರಿಪುಡೆ

ಎನಲು ತಾರಾಮಣಿಯು ಪೇಳ್ದಳು । ಘನ ಮಹಿಮನನು ಕಾಣುವಾ ಸೆಯು । ಮನದಿ ಬಲಿತುದು ಕರೆದು ತಾರೈ । ವಿನಯದಿಂದೆ ॥ ೧ ॥ ಆಗ ಲೆಂದಾ ದಾಸಿ ಧಾವಿಸು । ತಾಗ ಚಾರ್ವಾಕನನು ಸಂಧಿಸಿ । ಬೇಗದಲಿ ನಮಿ ಸುತ್ತಲೆಂದಳು । ರಾಗದಿಂದ ॥ ೨ ॥ ಪರಮಗುರು ಚಾರ್ವಾಕರೆಮ್ಮಯ ।

ಅರಮನೆಗೆ ಚಿತ್ತೈಸಬೇಕೆಂ । ದರಸಿ ತಾರಾಮಣಿಯು ಬಯಕೆಯು । ನೊರೆಯು ಬಂದೆ ॥ ೩ ॥ ಎಂದೆನಲು ಚಾರ್ವಾಕ ಸಂತಸ । ದಿಂದ ತಾನೊಡಬಟ್ಟು ರಾಣಿಯು । ಮಂದಿರಕ್ಕಭಿಸವಿಸೆ ಕಾಣುತ । ಮಂದಗಮನೆ ॥ ೪ ॥ ಬಲು ವಿಧದೊಳುಪಚರಿಸುತೆಂದಳು । ಅಲಘು ಮಹಿಮ ಮಹಾತ್ಮನೆಂಬುದ । ತಿಳಿದೆ ತವ ತತ್ವೋಪದೇಶವ । ನೊಲಿದು ತಿಳುಪೈ ॥ ೫ ॥

ಬೇಗಡೆ—ಅಷ್ಟ

ಎನಲು ಪೇಳ್ದನು ನಗುತ ಚಾರ್ವಾಕ । ಸಂತೋಷವಾದುದು । ವನಿತೆ ಕೇಳಿದು ಬಾಳ ರಸಪಾಕ ॥ ತನು ಮನದ ಸುಖವೆಂಬುದಿದೆ ಜೀ । ವನವ ಘನಗಂಸ್ಥ್ಯವ ಸುಖ ಭೋ- । ಜನ, ಶಯನ, ರಸಪಾನ, ಗಾನವು । ಕುಣಿತವೀ ಭೋಗಗಳೆ ಸ್ವರ್ಗವು ॥ ೧ ॥ ಭಕ್ತಿ ವ್ರತ ಮುಕ್ತಿಗಳ ಮರುಳುಗಳ । ಜೇರಿಂಗೆ ಚೆನ್ನೀ । ರಿತ್ತು ಚಿಂತಿಪ್ಪುದೈಹಿಕದ ತಿರುಳ ॥ ಮುಕ್ತಿಯೆಂಬುದು ಭ್ರಮೆಯು ಸತ್ತರೆ । ಮತ್ತೆ ಶೂನ್ಯವು ಬಾಳ ಭೋಗದ । ತುತ್ತ ನೆರೆ ಚಪ್ಪರಿಸುತಿಂದ್ರಿಯ । ತೃಪ್ತಿಯಲಿ ಸಾರ್ಥಕತೆ ಸಾರ್ವುದು ॥ ೨ ॥ ಪರಿಹರ ಬ್ರಹ್ಮಾದಿ ಸುರರೆಲ್ಲ । ಶಾಶ್ವತರು ಎಂಬರೆ । ಬರಲು ಕಲ್ಪವು ಮರೆಗೆ ಸಲುವರಲಾ ॥ ಕುರುಡ ಬಡಿಗೆಯ ಧರಿಸಿದಂದದಿ । ಪರಮ ಅಂಧ ಶ್ರದ್ಧೆಯಿಂ ಪರಿ । ಪರಿಯ ಮತಗಳ ಉರುಳು ಗುಣಿಕೆಗೆ । ಕೊರಳ ನೀವುದು ಮರುಳುತನವೈ ॥ ೩ ॥ ಸತಿಗೆ ಪತಿ ಪರದೈವವೆಂಬುದಿದು । ಪೆಣ್ಗಳನು ವಂಚಿಪ । ಮತಿ ವಿಕಳರಾಲಾಪ ವಿಕಟವಿದು ॥ ಹಿತದಿ ಪತಿಸುಖವೊದಗದಿರಲಾ । ಸತಿಯು ಮನಬಂದವಗೆ ತನುವ । ರ್ಪಿತಗೊಳಿಸಿ ಸೊಗವೀಂಟುವುದೆ ಸ । ನ್ಮತವು ಮನ್ಮಥ ಮಂತ್ರ ಸಿದ್ಧಿಯು ॥ ೪ ॥

ಭಾಮಿನಿ

ಎಂದ ಚಾರ್ವಾಕನ ವಚನ ಮಧು । ಬಿಂದು ಕರ್ಣೇಂದ್ರಿಯವ ಸೋಂಕಲು । ಸಂದು ಬಿಟ್ಟಿತು ಅಚಲ ಪಾತಿವ್ರತ್ಯ ಸುಂದರಿಯ ॥ ಮುಂದು ಗೆಟ್ಟಳು ಮದನ ಕಾತರ । ದಂದುಗದಿ ಘನ ಶೀಲ ಶಿಥಿಲತೆ । ಪೊಂದಿ ನಿಟ್ಟು ಸಿರಿಟ್ಟು ತಾರಾಮಣಿಯು ಪೇಳಿದಳು ॥ ೧ ॥

ಕೇತಾರ—ಝಂಪೆ

ಮಹನೀಯ ಧನ್ಯಳಾದೆ । ನೀನೆನಗೆ । ವಿಹಿತ ಧರ್ಮವನುಸುರಿದೆ ॥

ಸಿಹಿಯುಂಣಿಸಲುಣುವ ಬಗೆಯು । ಸೂಚಿಸಿದೆ । ಅಹಹ ಬೆಳಕಾದುದಯ್ಯ ॥ ೧ ॥
ಮತ್ತೆ ದರುಶವಾಡು ನಾಳೆ । ನಿನಗಾಗಿ । ಹೊತ್ತು ಹಾರೈಪೆನಿಲ್ಲಿ ॥ ಚಿತ್ತದಾ
ನಂದ ಶರಧಿ ಯೊಳು ಮುಳುಗಿ । ಮುತ್ತುಗಳ ನೀಡೊ ಮುದದಿ ॥ ೨ ॥

ಬಾಮಿನಿ

ತರುಣಿ ಮಾರನ ಹತಿಗೆ ಸಿಲುಕಿದ । ಪರಿಯರಿತು ಚಾರ್ವಾಕನೆಂದನು ಬರುವೆ ನಾಳೆಗೆ ನೀಡುವೆನು ದಿವ್ಯೋಪದೇಶವನು ॥ ಹರುಷವಾಯ್ತೆಂದೆನಲು ರಾಣಿಯು । ಚರಣಕಾನತಳಾಗಿ ಕಾಪನು । ಕರುಣಿ ನಾಳೆಗೆ ಬಿಜಯ ಮಾಡೆಂನುತ ಬೀಳ್ಕೊಟ್ಟು ॥ ಮನದಿ ತರಹರಿಸುತ್ತ ತಾರಾ । ಮಣಿಯು ಹಗಲನ್ನೆಂತೊ ನೂಂಕಿತ- । ಲಿನಿಯುಸನೆ ನೆನೆನೆನೆದು ಶಯ್ಯೆಯ ಸಾರ್ದು ಹೊರಳುತಲಿ ॥ ಕಣ್ಣುಗಳಿಗೆ ಕವಿಯಲ್ಕೆ ನಿದ್ರೆಯು । ಕನಸಿನಲಿ ಮೈದೋರೆ ಚಾರ್ವಾಕನಲಿ ನೆರೆದಳು ಚುಂಬನಾಲಿಂಗನದಿ ಮುದವೇರಿ ॥

ಸಾಂಗತ್ಯ—ರೂಪಕ

ತಾರಕಾಕ್ಷನ ಭಾರ್ಯೆಯಿಂತು ಕಂಗೆಡುತಿರೆ । ಜಾರಿತು ವರ ಪಾತಿವ್ರತ್ಯ ॥
ಚಾರುವಾಕನು ಮತ್ತೆ ಮಿಕ್ಕುಳಿದೀರ್ವರ । ನಾರಿಯರನು ಗೆಲ್ದನಿಂತು ॥ ೧ ॥
ವರ ಸತಿ ಶಕ್ತ್ಯಯಿಂತಳಿಯಲು ತ್ರಿಪುರಾ । ಸುರರಿಗಂತ್ಯವು ಬಂದುದೆನುತ ॥
ಹರಿಯು ತೋಷದೊಳಿರಲಮರರು ಕೈಲಾಸ । ಗಿರಿಗೈದಿ ಮೊರೆಯಿಟ್ಟರಂದು
॥ ೨ ॥

ಪುನ್ನಾಗವರಾಳಿ—ತ್ರಿವುಡೆ

ಶಂಕರಾ ಅಭಯಂಕರಾ ಕರುಣಾಕರಾಯ ನಮೋಽಸ್ತುತೇ । ಪಂಕಜೇಕ್ಷಣ ಸಖ ಮೃಗಾಂಕ ಕಪರ್ದಿಶೂಲಿ ನಮೋಽಸ್ತುತೇ ॥ ಕಾಲಕಾಲ ನಮೋಽಸ್ತುತೇ ॥ ವರ ಫಾಲನಯನ ನಮೋಽಸ್ತುತೇ । ಬಾಲಚಂದ್ರ ವಿಭೂಷಣಾಯ ನಿರಂಜನಾಯ ನಮೋಽಸ್ತುತೇ ॥ ೧ ॥

ಮೋಹನ—ತ್ರಿವುಡೆ

ಎಂದು ಸಂಸ್ತುತಿ ಗೈಯಲರಿತಾ ಗಂಧುದರ ಮೈದೋರುತೆಂದನು । ಬಂದಿರೇ ಬರ್ಹಿಲರು ಬಹುಪರಿ । ನೊಂದಿರೇನು ॥ ೧ ॥ ಎನೆ ಪುರಂದರನೆಂದ ದೇವನೆ । ನಿನಗೆ ತಿಳಿಯದುದುಂಟೆ ತ್ರಿಪುರರ ಘನ ಮದೋತ್ಕಟ ಕಾರ್ಯ

ಗಳನೊ । ಕ್ಕಣಿಪ್ರದೆಂತು ॥೨॥ ಮೂರು ಲೋಕದ ಪಾರುಪತ್ಯವು । ಘೋರ ದನುಜರಿಗಾಯ್ತು ಜಗದಾ । ಧಾರ ಧರ್ಮದ ಬೇರುಗೊಲಿಯುದು । ಪೂರ ವಾಯ್ತು ॥ ೩ ॥ ಅಟ್ಟ ಹಾಸದ ದುಷ್ಟ ದಿತಿಜರ । ಹುಟ್ಟಡಗಿಸಿ ಸಕಲ ಲೋಕದ । ಕಷ್ಟಗಳ ಪರಿಹರಿಸಿ ಕ್ಷೇಮವ । ಪುಟ್ಟಿಸುವುದು ॥ ೪ ॥

ಸರ್ವ ಸತ್ವದಧೀಶರೆಲ್ಲರು । ಶರ್ವನೆಡೆಯುಸು ಸಾರಲಂದಿನ । ಪರ್ವ ಕಾಲದಿ ಶುಭವು ಬೆಳಗಿದು । ದುರ್ವರೆಯುಲಿ ಪರಮ ಪಶುಪತಿ ಪಟ್ಟವನು ಹರಿ । ಶರಜಸಂಭವ ಸುರರು ಹರುಷದಿ । ಪರಗೆ ಕಟ್ಟಲು ಸಕಲ ಶಕ್ತಿ ಗಳೆರಕದಿಂದ ॥

ಬೇಹಗ್—ಏಕ

ಲಾಲಿಪುದೆಲೆ ಸುರಪಾಲಾದ್ಯರೆ ಬಲು । ಗೋಳಾಡಿಸಿದರೆ ತ್ರೈಪುರರು ॥ ಖೂಳರ ತರಿದೊಟ್ಟುವೆನವರಿಗೆ ಕಡೆ । ಗಾಲವು ಬಂದಿಹುದಿಂದಿನೊಳು ॥೧॥ ವಿಧಿಯ ವರವು ಸಟೆಯಾಗದ ತೆರ ನವ । ವಿಧದೊಳು ಸನ್ನಾಹವ ಗೈದು ॥ ಮದ ಮುಖರಾ ಪುರತ್ರಯವನು ಲಯಿಸುತ । ಮುದಗೊಳಿಸುವೆ ಜಗವೆಲ್ಲ ವನು ॥ ೨ ॥

ವಾರ್ಧಿಕ

ನೋಡಿರೈ ಜೋದ್ಯವೆಂದೆನುತಾ ಮಹೇಶನಾ । ರೂಢಿಯನೆ ಸ್ಯಂದನಂ ಗೈದು ರವಿ ಶಶಿ ಚಕ್ರ ಜೋಡಿಸಿ ಚತುರ್ವೇದದಶ್ವಗಳ ಹೂಡಿ ಸಾರಥ್ಯಕ್ಕೆ ಪರಮೇಷ್ಠಿಯ ॥ ರೂಢಿಸುತ ಮೇರುವಂ ಧನುಗೆಯ್ದು ವಾಸುಕಿಯು । ಮೋಡಿಯಲಿ ಹೆದೆ ಗೈದು ಹರಿಯು ಬಾಣವ ಮಾಡು । ತಾಡಂಬರದಲಿ ತ್ರಿಪುರಾಸುರರ ಸಮ್ಮುಖಕೆ ನಡೆಯುಲತಿ ಘೋಷದಿಂದೆ ॥ ೧ ॥

ಮಾರವಿ—ಏಕ

ಹದನವನರಿತಾಗಳೆ ಹರಿತಂದರು । ವಿಧವಿಧ ಭೂತಗಳು ॥ ಅದುಭುತ ರೂಪದೊಳಾರ್ಭಟಿಸುತ್ತಲಿ । ಕದನ ಕುತೂಹಲದಿ ॥ ೧ ॥ ನಂದಿಯು ಭೃಂಗಿಯು ಭ್ರುಕುಟಿ ವಿನಾಯಕ । ರೊಂದಾಗಿಯೆ ಮಸಗಿ ॥ ಗೊಂದಣದಲಿ ಬಲು ಘೋಷವನೆಸಗುತ । ಲಂದು ಪೊರಡೆ ಭರದಿ ॥ ೨ ॥

ಸೌರಾಷ್ಟ್ರ—ತ್ರಿವುಡೆ

ಹಾರತೆಯುನರಿತಾಗ ವೇಗದಿ । ವೀರಭದ್ರನು ಧಾವಿಸುತಲಾ । ಮಾರ

ಪರ ನಡಿಗೆರಗುತೆಂದನು । ವೀರತನದಿ ॥ ೧ ॥ ತಾತ ಲಾಲಿಸು ತ್ರಿಪುರ ಮಂಥನಕೆ । ಸಾತಿಶಯದಲಿ ನೀನೆ ಪೂರಯವ । ಪಾತಿದೇತಕೆ ಶ್ರಮವ ಕೊಂಬುದೆ । ಜಾತನಿರಲು ॥ ೨ ॥ ದುಷ್ಟ ದಕ್ಷಪುರಟ್ಟನೆನಗೀ । ಭ್ರಷ್ಟರನು ಮರ್ದಿಸುವುದೇತರ । ಕಷ್ಟವೀಕ್ಷಣಾ ಕೊಲುವೆನಪ್ಪಗೆ । ಕೊಟ್ಟರೀಗ ॥ ೩ ॥

ವರಾಳಿ – ರೂಪಕ

ಎನಲು ರುದ್ರನು । ನಗುತಲೆಂದನು । ಘನ ಪರಾಕ್ರಮಿ । ಸಂಶಯ ವೇನು ॥ ಎನಗು ರಣದೊಳು । ಬಿನದ ಪುಟ್ಟಿದೆ । ಬಾಗು ಖಳರನು । ಕೆಣಕಿ ನೋಡುವೆ ॥ ೧ ॥ ಸದರವಲ್ಲವು । ತ್ರಿಪುರರಾಹವ । ಒದಗಿಸಿಹ ವರ । ಪದುಮ ಸಂಭವ ॥ ಕದನ ಕಣದಲಿ । ಪಾಳಯೀವೆನು । ತುದಿಯೊಳಸುರರ । ಪ್ರಳಯಗೈವೆನು ॥ ೨ ॥

ಸೌರಾಷ್ಟ್ರ–ತ್ರಿವುಡೆ

ಇಂತು ಭದ್ರನೊಳರುಹುತಲ್ಲರ । ಸಂತವಿಸುತಗಜೇಶ ಗಣಗಳ । ತಿಂತಿಣಿಯ ನೊಡಗೂಡಿ ನಡೆದನು । ಅಂತರಿಸದೆ ॥ ೧ ॥ ಕಡಲು ಕುದಿದುದು ಕಂಪಿಸಿತು ಭುವಿ । ಯೊಡಲು ಗಿರಿಗಳ ಮುಡಿಗಳುದುರಿಯೆ । ಕೆಡೆದುದಘ ಟಿತ ಘಟನೆಯಾದುದು । ನುಡಿವುದೇನು ॥ ೨ ॥

ಭಾಮಿನಿ

ಸಾಸಿರದ ವರ್ಷಗಳು ಉರುಳಲು । ಸಾಸಿಗರ ತ್ರೈಪುರಗಳಂಬರ । ವೀಸುತಲಿ ತಾವೇಕರೇಖೆಗೆ ಬರುವ ವೇಳೆಯಲಿ ॥ ಬೀಸಿದಾ ದುರ್ವಿಧಿಯ ಕೈತವ । ಪಾಶ ಮುಸಿದುಯುನೆಂತು ಬಣ್ಣಿಪೆ । ರೋಷ ಭೀಷಣನೀಶ ಸಮರಾವೇಶದಿಂ ಬಂದ ॥ ೧ ॥

ಸೌರಾಷ್ಟ್ರ–ತ್ರಿವುಡೆ

ತಾರಕಾಕ್ಷನು ಸ್ವರ್ಣದುರ್ಗದ । ಭೂರಿ ಸಿಂಹಾಸನದೊಳಿರುತಿರೆ । ವಾರತೆಯ ತಂದೊರೆದರಾತಗೆ । ಚಾರರಂದು ॥ ೧ ॥ ಕೇಳುತಲಿ ಕಿಡಿಗೆದರಿ ಸೋದರ । ಮೇಳದಲಿ ತಾ ಪೇಳ್ದ ಭಸ್ಮೋ । ದ್ಧೂಳ ಬಂದನು ಗಡ ವಿನೂತನ । ಕಾಳಗಕ್ಕೆ ॥ ೨ ॥ ಮೂವರೊಂದಾಗಿರಲು ಭೀತಿಯು । ಭಾವ ವಿಲ್ಲವು ಶಿವನನಿದಿರಿಸ । ಲಾವು ಸನ್ನಹಗೈವುದೆಮ್ಮೊ । ತಾವಿನೊಳಗೆ ॥ ೩ ॥

ಕೇಳುತಲಿ ತಾಮ್ರಾಕ್ಷ ಗರ್ಜಿಸಿದ । ಕೇರಿ ಬರುವನೆ ಭಳಿರೆ ಪಮುಗನು ॥ ಕೂಲವಾದುದು ಖತನ ಸೇನಿನ । ಪಾಳಿಯಾಯ್ತು ॥೪॥ ಅನುಜ ವಿದ್ಯುನ್ಮಾಲಿ ಯೆಂದನು ಬಿನುಗು ಗಣಗಳ ಕಟ್ಟಿ ಕುಣಿವಾ । ತನು ಪಿನಾಕಿಯು ಮುಪ್ಪುರಂಗಳ । ಕೆಣಕಲುಂಟೆ ? ॥ ೫ ॥

ಭೈರವಿ – ತ್ರಿವುಡೆ

ಪ್ರೊರಟರಾಗ । ಿ ಪರರು । ಧುರಕೆ ಬೇಗ ॥ ಪುರತ್ರಯಂಗಳನೇಕ ರೇಖೆಯೊ । ಳಿರಿಸಿ ರಕ್ಷಾದುರ್ಗವೆಸಗುತ ॥ ಅನುಪಲ್ಲವಿಳಿರಿಸಿ ॥ ತರತರಾ ಯುಧಗಳನು ಜಳಪಿಸು । ತುರವಣಿಸುತಾರ್ಭಟಿಸುತ ॥ ಹರನ ಗಣ ವನ್ನಂಜಿಸುತ ಭೀ । ಕರ ರವದಿ ಬೊಬ್ಬಿರಿಯುತ ॥ ಬರಲಿ ಶಂಕರನೆನ್ನ ಪುರದಲಿ । ಸೆರೆಯಲಿಕ್ಕುವೆವೆನ್ನುತ ॥ ಸುರರ ಯಕ್ಷರ ಗರುಡ ಗಂಧ । ರ್ವರ ಗಡಣವನು ಜಂಕಿಸುತ್ತಲಿ ॥ ಪ್ರೊರಟರಾಗ ॥

ಯುದ್ಧ ನಂದಿ × ವಿದ್ಯುನ್ಮಾಲಿ

ಭೈರವಿ – ಅಷ್ಟ

ಲೋಕ ಕಂಟಕ ಕೇಳೆಲಾ । ಪರಪೀಡೆಯು । ಕಾಕು ಬುದ್ಧಿಯ ವಾಣೆಲಾ ॥ ಸಾಕಾದುದಿಳೆಗೆ ಮುಪ್ಪೊಳಲ ಹಾವಳಿಯಿದ । ಪ್ರೋಕ್ಷಿಳಿಸಲು ಬಂದೆವು ॥ ೧ ॥ ಯಾರೆಲೊ ಬಡ ಬಸವ । ಬರಿದೆಯೇಕೊ । ತೋರುವೆ ಪೌರುಷವ ॥ ಹೋರಿಯು ಸಿಂಹನ ಗವಿಗಯ್ದಿ ಕೆಣಕಿಯೆ ಹೋರಾಡಿ ಗೆಲ್ವುದುಂಟೆ ॥ ೨ ॥ ದುರ್ಮದ ದಾನವನೆ । ಜಗದ ಸ । ದ್ಧರ್ಮದ ಹಾದಿಯನೆ ॥ ನಿರ್ಮೂಲಗೈದಟ್ಟಹಾಸದಿ ಮೆರೆದಂಥ । ಹೆಮ್ಮೆಯನಡಗಿಸುವೆ ॥ ೩ ॥ ಗಳಹ ಬೇಡೆಲೊ ವ್ಯರ್ಥದಿ । ಮಮ ಸಾಮರ್ಥ್ಯ । ದಳವ ಕಾಣೆಲೊ ಯುದ್ಧದಿ ॥ ಬಲವಂತರಿಳೆಯೊಳು ಬದುಕುವರೆಂಬುದ । ತಿಳಿಯದಾದೆಯ ಮೂರ್ಖನೆ ॥ ೪ ॥

ಯುದ್ಧ ವೀರಭದ್ರ × ತಾಮ್ರಾಕ್ಷ

ಭೈರವಿ—ಏಕ

ಫಡವೀರನೆ ನಿಲ್ಲೆಲವೊ । ಗಣ । ಗಡಣದೊಡನೆ ಬಹ ಚಲವೋ ॥

ದಡಿಗತನವ ಕಾಣಿಸದೆ । ನೀ । ನಡೆವುದು ಲೇಸೈ ಹಿಂದೆ ॥ ೧ ॥ ಹರನಿಂಪಗ ಚಾರವನು । ಗೈ । ದಿರುವಾ ದಕ್ಷಾಖ್ಯನನು ॥ ತರಿದಿಹ ಭದ್ರನು ನಾನೆ । ಸಂ । ಹರಿಸುವೆ ತ್ರೈಪುರರನ್ನೆ । ೨ ॥ ದಕ್ಷನ ಪರಿಯಂತಲ್ಲ । ಕೇ- । ಳಕ್ಷಯ ಬಲವಿದೆ ಕೇಳಾ ॥ ಶಿಕ್ಷಿಪ ಬಲ ನಿನಗಿಲ್ಲ । ಆ । ತ್ರ್ಯಕ್ಷನ ಗಣಿಸುವನಲ್ಲ ॥೩॥ ಭ್ರಷ್ಟನೆ ಬಾಯ್ಬಿಡ ಬೇಡ । ಅದ । ಟೆಷ್ಟೆಂಬುದ ನೀ ನೋಡ ॥ ಮೆಟ್ಟಿ ಮುರಿವೆ ತ್ರೈಪುರವ । ನೀ । ನೆಷ್ಟರವನೊ ಬಿಡೊ ಗರ್ವ ॥ ೪ ॥

ಯುದ್ಧ ಶಿವ × ತಾರಕಾಕ್ಷ

ಪಂತುವರಾಳಿ — ಝಂಪೆ

ಧೀರ ದನುಜ ತಾರಕಾಕ್ಷನೇ । ತ್ರೈಪುರವ ಕಟ್ಟಿ । ಭೂರಿ ಮದದಿ ಮೆರೆವ ಶೂರನೆ ॥ ಆರುಗೈಯದಂಥ ನಿನ್ನ ವೀರ ಸಾಹಸಕ್ಕೆ ಮೆಚ್ಚು । ತೋರುತಿಹೆನು ಆದರೇನು । ದಾರಿ ತಪ್ಪಿ ಭ್ರಷ್ಟನಾದೆ ॥ ೧ ॥ ಏತಕೆಂತ ಮಾತ ಪೇಳ್ವೆಯು । ಕುಮಾರನಿಂದ । ತಾತನನ್ನು ಗಾಸಿಗೈದೆಯು ॥ ಯಾತು ಧಾನರಿಗೆ ಏಳ್ಗೆಯೋತು ಬರಲು ಸಹನವಿರದೆ । ನೀತಿಗೆಟ್ಟು ಸುರರ ಪಕ್ಷ ಪಾತಿಯಾಗಿ ಬಂದೆಯಲ್ಲೊ ॥ ೨ ॥ ಪಕ್ಷಪಾತವಿಲ್ಲ ಕೇಳೆಲಾ । ಅನ್ಯಾಯ ಗಳನು । ಶಿಕ್ಷಿಪುದೆ ಕರ್ತವ್ಯ ತಿಳಿಯೆಲಾ ॥ ಈಕ್ಷಿಸಿದ ಸು... ಗಳನಪೇಕ್ಷೆ ಗೈದು ಸೂರೆಯೆಸಗಿ । ಸೊಕ್ಕಿ ಲೋಕಧರ್ಮವನ್ನು । ಮುಕ್ಕ ಮೆರೆದು ದಕ್ಕಿಸುವೆಯು ॥ ೩ ॥ ಠಕ್ಕು ಮಾತನಾಡಬೇಡೆಲಾ । ಭಕ್ತರನು ಶೂಲ । ಕಿಕ್ಕಿ ಕೊಲುವ ನೀಚ ನೀನೆಲಾ ॥ ಸಿಕ್ಕಿದುದು ಲೇಸಾಯ್ತು ನಿನ್ನನಿಕ್ಕಿ ಸೆರೆಗೆ ಪಾಡುಪಡಿಪೆ । ರಕ್ಷಿಸುವರು ಯಾರು ಲಯಾಧ್ಯಕ್ಷನೊಂದು ಪರಿಯ ಕಾಂಬೆ ॥ ೪ ॥

ಸೌರಾಷ್ಟ್ರ — ತ್ರಿವುಡೆ

ದುರುಳನೆಂದಾ ನುಡಿಯು ಕೇಳುತ । ಹರನು ಕೋಪಾಟೋಪದಿಂದಲಿ । ವರ ಶರಾಸನ ನೆಗಹಿ ಹೂಡಿದ । ಹರಿಯು ಶರವ ॥ ೧ ॥ ನೋಡುತಿರೆ ಬಾಸೆಲ್ಲೊ ರುಧಿಯು । ಜೋಡಿಕೆಯು ಜರ್ಜರಿತವಾಯ್ತೆನೆ । ಪಾಡುಗೆಟ್ಟಿತು ತ್ರೈಭುವನ ಭಯ । ತೀಡಿತಾಗ ॥ ೨ ॥ ಮಿಕ್ಕುಳಿದ ಸೋದರರು ತನ್ನಯ । ಇಕ್ಕಡೆಯೊಳಿರೆ ತಾರಕಾಕ್ಷನು । ಘಕ್ಕನರಿದನು ಓದಗಿ ಬಂದಸು । ಮೋಕ್ಷ

ಕಾಲ ॥ ೩ ॥ ಅರಿತೆನರಿತೆನು ದೇವ ನಮ್ಮಯ ಪರಮ ಶಕ್ತಿಯ ಪೂರ್ಣವೆ
ಬುದ ನಿರುತ ವರ ದಿವ್ಯಾತ್ಮ ಶಕ್ತಿಯ । ನರಿಯದಿಂತು ॥ ೪
ಬೌದ್ಧಿಕ ಭೌತಬಲದಲಿ । ಪುರವಗೈದೆವು ಕೃತ್ರಿಮದೊಳತಿ । ದುರ
ಜ್ಞಾನಶೂನ್ಯತೆ । ಯುರುಬಿನಿಂದ ॥ ೫ ॥ ಮೃತ್ಯುವಿಗೆ ಹಿಂದೆಗೆ
ಸಾರ್ಥಕವು ವರ ಲೋಕ ತಾರಕ । ಶಕ್ತಿಯೆಲ್ಲವು ನೆರೆಯೆ
ಉತ್ಸವವಿದು ॥ ೬ ॥ ಹರಗೆ ಮಣಿದಾ ತ್ರೈಪುರರು ಬಳಿ । ಕಿರದೆ
ಹೋರಟೆಯ ಕೊಡು । ತಿರಲು ವೈಷ್ಣವ ಶರವು ಜ್ವಲಿಸುತ ।
॥ ೭ ॥ ಬಿರಿದುದೊ ಬ್ರಹ್ಮಾಂಡವೆನೆ ಘನ । ತರದ ರವದಲಿ
ಗಳು । ಹೊರಳುತುರುಹಿದವಾಗ ತ್ರಿಪುರಾ । ಸುರರ ಸಹಿತ ॥
ಘೋಯೆಂದೆನುತ ಪುಷ್ಪದ । ಸರಿಯ ಸುರಿದರು ದೇವ ದುಂದುಭಿ ।
ದಾಕ್ಷಣ ಶಿವಗೆ ವಂದಿದರು । ಸರುವರಂದು ॥

ಮಂಗಲ ಪದ ಮೋಹನ—ತ್ರಿವುಡೆ

ಆರ ಚೋದನ ಬಲದೊಳಪರಂ । ಪಾರ ವಿಶ್ವವು ಚಲಿ
ಆರ ಚಾಲನ ಸಂಜ್ಞೆಯೊಂದನು । ಮೀರಿ ತೃಣಕಣ ಚಲಿಸದೋ
ಸೃಷ್ಟಿ ಪಾಲನ ಹನನ ಕಾರ್ಯದ । ಗುಟ್ಟು ಯಾರೊಳಗಿರುವು
ಕಟ್ಟಿ ಕೆಡಹುತಲಟ್ಟಹಾಸದಿ । ನಾಟ್ಯಗೈಯುವುದಾವುದೋ ॥ ೨
ರಹಸ್ಯಕೆ ದಿವ್ಯ ನಿಯತಿಗೆ । ಭೂರಿ ಚೋದ್ಯಕೆ ಮಂಗಲಂ ॥ ಕಾರಣ
ಧಾರಣಾತ್ಮಕ । ವಾ ಖತಕೆ ಜಯ ಮಂಗಲಂ ॥ ೩ ॥

ನಗರದಲ್ಲಿ ಅವಳಿ ಪ್ರಕಾಶನ ಸಂಸ್ಥೆಗಳು

ನಿತ್ಯಾನಂದ ಗ್ರಂಥಾಲಯ

ದೇವರ ಭಜನಿ ಪುಸ್ತಕಗಳು,
ದೇವರ ಸ್ತೋತ್ರಗಳು, ಯಕ್ಷಗಾನ
ಪ್ರಸಂಗಗಳು, ಕನ್ನಡ ಮಲಯಾಳ-
ಶಿಕ್ಷಕ, ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ಹಾಗೂ ಇತರ
ಅಮೂಲ್ಯ ಕನ್ನಡ ಧಾರ್ಮಿಕ ಗ್ರಂಥಗಳ
ಪ್ರಕಾಶಕರು, ಮಾರಾಟಗಾರರು, ಪತ್ರಿಕಾ ಏಜೆಂಟರು.

ವಿ.ಪಿ.ಸಿ. ಪಬ್ಲಿಕೇಷನ್ಸ್

ಹೊಸ ಕನ್ನಡ ಚಿತ್ರಗೀತೆಗಳು
ಹೊಸ ಹಿಂದಿ ಚಿತ್ರಗೀತೆಗಳು
ಹೊಸ ತುಳು ಚಿತ್ರಗೀತೆಗಳು
ನ್ಯೂ ಫಿಲಂ ಸಾಂಗ್ಸ್, ಕನ್ನಡ ಚಿತ್ರಗಳ
ಭಕ್ತಿಗೀತೆಗಳು ಹಾಗೂ ತುಳುನಾಟಕ
ಪುಸ್ತಕಗಳ ಸಕಾಲಿಕ ಪ್ರಕಾಶಕರು.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಸೌಲಭ್ಯಗಳು!

ನಿತ್ಯಾನಂದ ಗ್ರಂಥಾಲಯ ಫೋನ್: 27775 **ವಿ.ಪಿ.ಸಿ. ಪಬ್ಲಿಕೇಷನ್ಸ್**
ಕೇಂದ್ರ ಬಸ್ ಸ್ಟೇಂಡ್, ಹಂಪನ ಕಟ್ಟೆ, ಮಂಗಳೂರು-575001 (ಕರ್ನಾಟಕ)

ಮುದ್ರಕರು: ಶಾರದಾ ಪ್ರೆಸ್, ಮಂಗಳೂರು-575 001.